ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ದಂಡುಪ್ರದೇಶ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು
**ಪ್ರಮೋದ್ ನ. ಗೋ.**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**DANDU PRADESH:** An Introduction Book on Places in Karnataka that Played a Major Role in the Freedom Struggle, Written by Pramod N.G., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರಮೋದ್ ನ. ಗೋ.

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೬೪

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ನಾನು ಸ್ವಾತಂತ್ರ್ಯೋತ್ತರ ಭಾರತದಲ್ಲೇ ಹುಟ್ಟಿದ್ದರಿಂದ ಬಾಲ್ಯದಿಂದಲೂ ಈ ಸ್ವಾತಂತ್ರ್ಯಕ್ಕೆ ನಮ್ಮ ಪೂರ್ವಿಕರು ತೆತ್ತಿರುವ ಬೆಲೆ ಎಷ್ಟು ಎಂದು ತಿಳಿಯುವುದು ನನಗೆ ಸಹಜ ಆಸಕ್ತಿಯ ವಿಷಯವಾಗಿತ್ತು. ಹಾಗಾಗಿ ಸ್ವಾತಂತ್ರ್ಯ ಹೋರಾಟದ ಅನೇಕ ಘಟ್ಟಗಳ ಬಗ್ಗೆ ತಿಳಿಯುವ ಪ್ರಯತ್ನ ನಿರಂತರವಾಗಿ ಸಾಗಿದೆ. ಅಮೃತ ಮಹೋತ್ಸವದ ಈ ಯೋಜನೆಯಲ್ಲಿ ಕರ್ನಾಟಕದ ಒಂದು ಸ್ಥಳವನ್ನು ಕೇಂದ್ರವಿಟ್ಟುಕೊಂಡು ಬರೆಯಬೇಕೆಂದು ನನಗೆ ಸೂಚಿಸಿದಾಗ ಸಹರ್ಷದಿಂದ ಸ್ವೀಕರಿಸಿದೆ. ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ನನಗೆ ಇಲ್ಲಿನ 'ದಂಡು ಪ್ರದೇಶ'ದ ವಿಷಯ ನೀಡಿದಾಗ ಅತ್ಯಂತ ಕುತೂಹಲದಿಂದ ನನ್ನ ತಯಾರಿ ಆರಂಭಿಸಿದೆ.

ಪರಕೀಯರ ಆಗಮನದ ದಿನದಿಂದಲೇ ಈ ದೇಶದಲ್ಲಿ ಸ್ವಾತಂತ್ರ್ಯದ ಹೋರಾಟ ಪ್ರಾರಂಭವಾಗಿದೆ. ನಮ್ಮ ದೇಶ, ಧರ್ಮ, ಸಂಸ್ಕೃತಿ, ಉಡುಗೆ–ತೊಡುಗೆಗಳು ಎಲ್ಲದರ ಮೇಲೂ ಆಕ್ರಮಣ ನಡೆದಿದೆ. ದೇಶದ ಪ್ರತಿಯೊಂದು ಊರಿನಲ್ಲಿ ವಿವಿಧ ಆಯಾಮಗಳಲ್ಲಿ ಇದರ ವಿರುದ್ಧ ಹೋರಾಟ ನಡೆದಿದೆ. ಕೆಲವು ಬಾರಿ ನಾವು ಗೆದ್ದಿರಬಹುದು, ಕೆಲವೊಮ್ಮೆ ಸೋತಿರಬಹುದು ಆದರೆ ನಾವು ಸಾಯಲಿಲ್ಲ. ಪ್ರತಿ ಶತಮಾನದಲ್ಲಿ ಪ್ರತಿ ದಶಕದಲ್ಲಿ ಈ ಸಂಘರ್ಷವನ್ನು ಜಾರಿಯಲ್ಲಿಡಲು ಯಾರಾದರೊಬ್ಬ ಮಹಾಪುರುಷ ಹುಟ್ಟಿಬಂದು ಹೋರಾಟವನ್ನು ಮುಂದುವರೆಸಿದ್ದಾರೆ. ಇವೆಲ್ಲದರ ಪರಿಣಾಮವಾಗಿಯೇ ೧೯೪೭ರ ಆಗಸ್ಟ್ ೧೫ರಂದು ಭಾರತ ಸ್ವತಂತ್ರವಾಯಿತು.

ಬ್ರಿಟಿಷರು ತಮ್ಮ ಸೇನೆಯನ್ನು ಇರಿಸಲು ಆಯ್ಕೆಮಾಡಿದ್ದ ಬೆಂಗಳೂರಿನ ಈ ದಂಡು ಪ್ರದೇಶ ಕೂಡ ದೇಶವ್ಯಾಪಿ ನಡೆದ ಹೋರಾಟಕ್ಕೆ ಹೊರತಾಗಿರಲಿಲ್ಲ. ಈ ಪುಸ್ತಕದಲ್ಲಿ 'ದಂಡು ಪ್ರದೇಶ' ಕೇಂದ್ರವಾಗಿರಿಸಿಕೊಂಡು ಬೆಂಗಳೂರಿನಲ್ಲಿ

ನಡೆದ ಸ್ವಾತಂತ್ರ್ಯ ಹೋರಾಟದ ವಿವಿಧ ಮಜಲುಗಳನ್ನು ಅವಲೋಕಿಸುವ ಪ್ರಯತ್ನ ನಡೆದಿದೆ.

ಸುಮಾರು ಐದುನೂರು ವರ್ಷದ ಇತಿಹಾಸದ ಬೆಂಗಳೂರು ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಹೆಚ್ಚಿನ ಸಮಯ ಈ ದೇಶದ ಮಣ್ಣಿನ ಜನರೇ ಇಲ್ಲಿ ಆಳಿದ್ದಾರೆ, ಪರಕೀಯರ ಆಳ್ವಿಕೆಗೂ ಸಿಲುಕಿತ್ತು. ವಿಶೇಷವೆಂದರೆ ಈ ಎಲ್ಲಾ ಸಂದರ್ಭದಲ್ಲೂ ಉತ್ತರ ಭಾರತದ ಕೆಲವು ನಗರಗಳಂತೆ ತನ್ನತನವನ್ನು ಕಳೆದುಕೊಳ್ಳದೇ 'ಸ್ವ'ತ್ವವನ್ನು ಉಳಿಸಿಕೊಂಡಿದೆ.

ಕೇವಲ ಬ್ರಿಟೀಷರ ವಿರುದ್ಧದ ಹೋರಾಟಕ್ಕೆ ಸೀಮಿತಗೊಳ್ಳದೇ ಐದು ಶತಮಾನಗಳಲ್ಲಿ ಈ ನೆಲದ ಸಂಸ್ಕೃತಿ ಮತ್ತು ಪರಕೀಯರ ವಿರುದ್ಧದ ಸಂಘರ್ಷವನ್ನು ಸಮಗ್ರವಾಗಿ ಇಲ್ಲಿ ಚಿತ್ರಿಸುವ ಪ್ರಯತ್ನ ಮಾಡಿರುವೆ. ಈ ಪುಸ್ತಕದ ತಯಾರಿಗೆ ಮಿಥಿಕ್ ಸೊಸೈಟಿಯ ಗ್ರಂಥಾಲಯಕ್ಕೆ ನಾನು ವಿಶೇಷವಾಗಿ ಆಭಾರಿಯಾಗಿದ್ದೇನೆ. ಅಲ್ಲಿ ಬೆಂಗಳೂರಿನ ಕುರಿತಾಗಿ ಸಾಕಷ್ಟು ಸಂಶೋಧನಾ ಗ್ರಂಥಗಳು ದೊರೆತದ್ದು ಈ ನನ್ನ ಪ್ರಸ್ತುತಿಗೆ ತುಂಬಾ ಲಾಭವಾಗಿದೆ.

ಈ ಒಂದು ವಿಶಿಷ್ಟ ಅವಕಾಶಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಂಪಾದಕ ಮಂಡಲಿಗೆ ನಾನು ಆಭಾರಿ.

**ಪ್ರಮೋದ್ ನ. ಗೋ.**

## ಪರಿವಿಡಿ


| | | |
|---|---|---|
| ಶುಭ ಸಂದೇಶ | | ೩ |
| ಶುಭ ಸಂದೇಶ | | ೫ |
| ಪ್ರಧಾನ ಸಂಪಾದಕರ ಮಾತು | | ೭ |
| ಲೇಖಕರ ಮಾತು | | ೧೧ |
| ೧. | ಪ್ರಸ್ತಾವನೆ | ೧೭ |
| ೨. | ಬೆಂಗಳೂರಿನ 'ಶುಭಾ'ರಂಭ: ನಾಡಪ್ರಭುಗಳ ಅಡಿಪಾಯ | ೧೯ |
| ೩. | ಹಲಸೂರು : ಆಧ್ಯಾತ್ಮಿಕ ಕೇಂದ್ರ | ೨೨ |
| ೪. | ಶಹಾಜಿ ಆಳ್ವಿಕೆ : ಸ್ವತ್ವಕ್ಕೆ ಆದ್ಯತೆ | ೨೫ |
| ೫. | ಬಾಲಕ ಶಿವಾಜಿ: ಭವ್ಯ ಕನಸಿಗೆ ತಯಾರಿ | ೨೮ |
| ೬. | ಕಂಟೋನ್ಮೆಂಟ್ : ಬ್ರಿಟಿಷರ 'ದಂಡು' ನೆಲೆ | ೩೧ |
| ೭. | ಶಿಕ್ಷಣ–ಸಂಸ್ಥೆಗಳು–ಪತ್ರಿಕೆಗಳು : ಜನಜಾಗೃತಿಯ ತಳಪಾಯ | ೩೪ |
| ೮. | ಬ್ರಿಟಿಷರ ವಿರುದ್ಧ ಹೋರಾಟ : ಪ್ರಮುಖ ಘಟ್ಟಗಳು | ೪೦ |
| ೯. | ಬ್ರಿಟಿಷರ ವಿರುದ್ಧ ಹೋರಾಟ : ಪ್ರಮುಖ ನಾಯಕರು | ೪೯ |
| ೧೦. | ಸಮಾಪನ | ೫೭ |
| ೧೧. | ಗ್ರಂಥ ಋಣ | ೬೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | | ೬೧ |

ಬೆಂಗಳೂರಿನ

# ‘ದಂಡು ಪ್ರದೇಶ’

ಸ್ವಾತಂತ್ರ್ಯದ ಹೋರಾಟದ ಪುಟಗಳು



ಪ್ರಮೋದ್. ನ.ಗೋ

# ೧. ಪ್ರಸ್ತಾವನೆ

ಮಾನವ ಜೀವನಕ್ಕೆ ಪ್ರಾಣವಾಯು ಎಷ್ಟು ಅವಶ್ಯಕವೋ ಅವನ ಬದುಕು–ಬೆಳವಣಿಗೆಗೆ ಸ್ವಾತಂತ್ರ್ಯ ಕೂಡ ಅತ್ಯಾವಶ್ಯಕ. ಮಾನವನಷ್ಟೇ ಏಕೆ, ಪಶು–ಪಕ್ಷಿಗಳಲ್ಲೂ ಇದನ್ನು ನೋಡಬಹುದು–ಒಂದು ಪಕ್ಷಿಯನ್ನು ಪಂಜರದಲ್ಲಿ ಸೆರೆಹಿಡಿದಾಗ ಅದು ಸ್ವಾತಂತ್ರ್ಯಕ್ಕಾಗಿ ಪರಿತಪಿಸುವುದನ್ನು ನೋಡಬಹುದು, ಅದೇ ಪಂಜರದಿಂದ ಮುಕ್ತಿ ಸಿಕ್ಕಿದಾಗ ಅದು ಸ್ವತಂತ್ರವಾಗಿ ಆನಂದದಿಂದ ಹಾರಿ ಹೋಗುವುದು. ಅದೇ ರೀತಿ ಪ್ರತಿ ರಾಷ್ಟ್ರವೂ ತನ್ನ ಅಸ್ಮಿತೆಗಾಗಿ, ಸ್ವಾತಂತ್ರ್ಯಕ್ಕಾಗಿ ಅಪೇಕ್ಷಿಸುವುದು ಸಹಜ ಧರ್ಮವೇ ಆಗಿದೆ. ಓರ್ವ ಭಾರತೀಯನಿಗಂತು ಜೀವನದ ಗುರಿ 'ಸ್ವರ್ಗ'ವಲ್ಲ ಬದಲಾಗಿ 'ಮೋಕ್ಷ', ಅಂದರೆ ಸ್ವತಂತ್ರವಾಗಿರಬೇಕು ಎಂಬುದು ಅವನ ಜೀವನದ ಪರಮ ಗುರಿ.

ಪರಕೀಯರು ಈ ದೇಶದ ಮೇಲೆ ಆಕ್ರಮಣ ನಡೆಸಿ ತನ್ನ ಪ್ರಭುತ್ವ ಹೇರಲು ಯತ್ನಿಸಿದಾಗ, ನಮ್ಮ ದೇಶ ಸಹಜವಾಗಿಯೇ ಈ ಪಾರತಂತ್ರ್ಯದ ವಿರುದ್ಧ ಹೋರಾಟ ನಡೆಸಿತು. ಇಡೀ ದೇಶ ಅಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಪರಕೀಯರ ವಿರುದ್ಧದ ಕಹಳೆ ಮೊಳಗಿ ವಿವಿಧ ರೀತಿಗಳಲ್ಲಿ ಸ್ವಾತಂತ್ರ್ಯದ ಹೋರಾಟಗಳು ನಡೆದವು.ಒಂದು ಕಡೆ ಸಶಸ್ತ್ರ ಹೋರಾಟಗಳಾದರೆ ಇನ್ನೊಂದೆಡೆ ಸತ್ಯಾಗ್ರಹಗಳ ಮೂಲಕ ನಮ್ಮ ಸಂಘರ್ಷ ನಿರಂತರ ಜಾರಿಯಲ್ಲಿತ್ತು. ಭಾರತ ಸ್ವತಂತ್ರವಾಗಿ ೭೫ ವರ್ಷಗಳು ತುಂಬಿರುವ ಈ ಸಂದರ್ಭದಲ್ಲಿ ಈ ಸ್ವಾತಂತ್ರ್ಯಕ್ಕೆ ನಾವು ತೆತ್ತ ಬೆಲೆಯೆಷ್ಟು ಎಂದು ಅರಿಯುವುದು ಪ್ರತಿಯೊಬ್ಬ ಭಾರತೀಯನ ಸಹಜ ಕರ್ತವ್ಯವೇ ಸರಿ.

ಬ್ರಿಟಿಷರು ತಮ್ಮ ಸೇನೆಯನ್ನು ಇರಿಸಲು ಆಯ್ಕೆಮಾಡಿದ್ದ ಬೆಂಗಳೂರಿನ ಈ ದಂಡು ಪ್ರದೇಶ ಕೂಡ ದೇಶವ್ಯಾಪಿ ನಡೆದ ಹೋರಾಟಕ್ಕೆ ಹೊರತಾಗಿರಲಿಲ್ಲ. ಈ ಪುಸ್ತಕದಲ್ಲಿ 'ದಂಡು ಪ್ರದೇಶವನ್ನು' ಕೇಂದ್ರವಾಗಿರಿಸಿಕೊಂಡು ಬೆಂಗಳೂರಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವಿಧ ಘಟ್ಟಗಳನ್ನು ಅವಲೋಕಿಸುವ ಪ್ರಯತ್ನ ನಡೆದಿದೆ.

ನಾಡಪ್ರಭು ಕೆಂಪೇಗೌಡರಿಂದ ಬೆಂಗಳೂರಿನ ನಿರ್ಮಾಣವಾದಾಗಿನಿಂದ ಬ್ರಿಟಿಷರು ಈ ದೇಶವನ್ನು ಬಿಟ್ಟು ಹೊರಟ ಸಂದರ್ಭದವರೆಗಿನ ಸ್ವಾತಂತ್ರ್ಯ, ಅಸ್ಮಿತೆ, ಸ್ವಾಭಿಮಾನಗಳಿಗೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ಮುಂದಿನ ಪುಟಗಳಲ್ಲಿ ನೋಡೋಣ.

❑

## ೨. ಬೆಂಗಳೂರಿನ 'ಶುಭಾ'ರಂಭ: ನಾಡಪ್ರಭುಗಳ ಅಡಿಪಾಯ

೧೫೩೭ ಬೆಂಗಳೂರಿಗೆ ಬಹಳ ಮಹತ್ತ್ವದ ವರ್ಷ. ಏಕೆಂದರೆ ಇದೇ ವರ್ಷ ನಾಡಪ್ರಭು ಕೆಂಪೇಗೌಡರು ಭಾರತೀಯ ಪರಂಪರೆಯಂತೆ ಒಂದು ಶುಭ ಮೂಹೂರ್ತದಲ್ಲಿ ಯೋಗ್ಯ ಪುರೋಹಿತರ ಆದೇಶದಂತೆ ಬೆಂಗಳೂರಿನ ನಿರ್ಮಾಣ ಪ್ರಾರಂಭಿಸಿದರು. ಹಾಗಾಗಿ ಮುಂದೆಯೂ ಇಲ್ಲಿ ನಮ್ಮ ಸಂಸ್ಕೃತಿ ಅರಳಿದ್ದು, ಅದನ್ನು ಉಳಿಸಲು–ಬೆಳೆಸಲು ಅನೇಕ ಮಹಾಪುರುಷರು ಪ್ರಯತ್ನಿಸಿರುವುದನ್ನು ನೋಡಬಹುದು.

ಅದರ ಹೆಸರಿನ ಹಿಂದೆಯೂ ಒಂದು ರೋಚಕ ಕಥೆ ಇದೆ. ಹೊಸದಾಗಿ ನಗರ ನಿರ್ಮಾಣವಾಗಬೇಕೆಂದು ನಿರ್ಣಯ ಮಾಡಿದ ಮೇಲೆ, ಯಾವ ಹೆಸರು ಇಡಬೇಕೆಂಬ ಚಿಂತನೆ ನಡೆಯಿತು. ಕೆಂಪೇಗೌಡರ ತಾಯಿಯ ಹಾಗೂ ಪತ್ನಿಯ ತವರೂರು 'ಬೆಂಗಳೂರು' ಎಂಬ ಗ್ರಾಮವಾಗಿತ್ತು(ಈಗಿನ ಕೊಡಿಗೇಹಳ್ಳಿ ಬಳಿಯ ಪ್ರದೇಶ). ಇವರ ಮನೆಯ ಇಬ್ಬರೂ ಪ್ರಮುಖ ಸ್ತ್ರೀಯರ ತವರೂರ ಹೆಸರೇ ಇಡೋಣವೆಂದು ಕೆಂಪೇಗೌಡರು ನಿಶ್ಚಯಿಸಿದರು. ಅಂದರೆ, 'ಬೆಂಗಳೂರು' ಹೆಸರಿನ ನಿರ್ಣಯ ಮಾಡುವುದರಲ್ಲೂ ಭಾರತೀಯ ಸಂಸ್ಕೃತಿಯಲ್ಲಿ 'ಸ್ತ್ರೀ'ಗೆ ಕೊಡುವ ಗೌರವವನ್ನು ಗಮನಿಸಬಹುದು.

ಕೆಂಪೇಗೌಡರು ಮೂಲತ: ಯಲಹಂಕದ ಪಾಳೇಗಾರರಾಗಿದ್ದರು. ನಂತರ ಬೆಂಗಳೂರಿಗೆ ತಮ್ಮ ರಾಜಧಾನಿಯನ್ನು ಸ್ಥಳಾಂತರ ಮಾಡಿದರು. ಅಂದಿನಿಂದ ಒಂದು ಶತಮಾನಗಳ ಕಾಲ (೧೫೩೭ –೧೬೩೮) ಬೆಂಗಳೂರು ನಾಡಪ್ರಭುಗಳ ರಾಜಧಾನಿಯಾಗಿ ಹಾಗೂ ದಕ್ಷಿಣ ಭಾರತದ ಪ್ರಮುಖ ವಾಣಿಜ್ಯಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು.

ನಾಡಪ್ರಭುಗಳು ಅಂದು ನಿರ್ಮಿಸಿದ ಕೋಟೆ, ಅದರ ಸುತ್ತಲ ಪೇಟೆ, ಇವೇ ಬೆಂಗಳೂರೆಂದು ಗುರುತಿಸಲ್ಪಟ್ಟ ಪ್ರದೇಶ. ಕೋಟೆಯ ಸುತ್ತಲೂ ಸುಮಾರು ೩೦ ಅಡಿಯ ಮಣ್ಣಿನ ಗೋಡೆಯನ್ನು ನಿರ್ಮಿಸಲಾಗಿತ್ತು ಮತ್ತು ಗೋಡೆಯ ಪಕ್ಕ ಕಂದಕ ನಿರ್ಮಾಣ ಮಾಡಲಾಗಿತ್ತು. ಕೋಟೆಯ ಪ್ರವೇಶಕ್ಕೆ ನಾಲ್ಕು ದಿಕ್ಕಿನಲ್ಲೂ ಮುಖ್ಯದ್ವಾರಗಳನ್ನು ನಿರ್ಮಿಸಲಾಗಿತ್ತು. ಯಲಹಂಕ ದ್ವಾರ (ಉತ್ತರ), ಕೆಂಗೇರಿ ದ್ವಾರ (ಪಶ್ಚಿಮ), ಹಲಸೂರು ದ್ವಾರ(ಪೂರ್ವ) ಹಾಗು ಆನೇಕಲ್ ದ್ವಾರ (ದಕ್ಷಿಣ) – ಈ ರೀತಿ ನಾಲ್ಕು ದಿಕ್ಕಿನಲ್ಲಿ ನಾಲ್ಕು ದ್ವಾರಗಳು. ಈ ದ್ವಾರಗಳ ಬಳಿ ಕಟ್ಟಿಸಿದ ಆಂಜನೇಯ ಸ್ವಾಮಿ ದೇವಸ್ಥಾನಗಳು ಈಗಲೂ ಇವೆ. ಕೋಟೆಯ ಮುಖ್ಯ ದ್ವಾರಗಳಲ್ಲಿ ಆಂಜನೇಯನ ಗುಡಿಗಳನ್ನು ಕಟ್ಟುವ ಸಂಪ್ರದಾಯ ವಿಜಯನಗರ ಅರಸರ ಕಾಲದಿಂದ ಪ್ರಾರಂಭವಾಗಿತ್ತು.

ಈಗಿನ ದೃಷ್ಟಿಯಲ್ಲಿ ಪೇಟೆ ನೋಡ ಹೊರಟರೆ ಆಯತಾಕಾರ ವಿನ್ಯಾಸದಲ್ಲಿ ನಿರ್ಮಿತವಾದ ಈ ಕೋಟೆಯ ಪಶ್ಚಿಮದಲ್ಲಿ ಬಿನ್ನಿ ಮಿಲ್‌ವರೆಗೆ, ಪೂರ್ವದಲ್ಲಿ ಹಲಸೂರು ಗೇಟ್ ಪೋಲಿಸ್ ಠಾಣೆಯವರೆಗೆ, ಉತ್ತರದಲ್ಲಿ ಮೈಸೂರು ಬ್ಯಾಂಕ್ ಸರ್ಕಲ್ ವರೆಗೆ ದಕ್ಷಿಣದಲ್ಲಿ ಕೆ.ಆರ್.ಮಾರುಕಟ್ಟೆಯವರೆಗೆ ವಿಸ್ತರಿಸಿತ್ತು. ಒಂದೊಂದು ಕಸುಬಿನವರಿಗೆ ಒಂದೊಂದು ಪೇಟೆ ಅಕ್ಕಿ ಪೇಟೆ, ಬಳೆ ಪೇಟೆ..ಇತ್ಯಾದಿ ನಿರ್ಮಾಣವಾಗಿದ್ದು ಅವುಗಳಲ್ಲಿ ಬಹುತೇಕ ಸ್ಥಳಗಳ ಹೆಸರು ಈಗಲು ಇರುವುದು ಗಮನಿಸಬಹುದು.

ಹಲಸೂರು ದ್ವಾರವು ಐತಿಹಾಸಿಕವಾಗಿಯೂ ಬಹಳ ಮುಖ್ಯವಾದದ್ದು. ಈ ದ್ವಾರದ ಕಡೆಯಿಂದಲೇ ೧೭೯೧ರಲ್ಲಿ ಅಪಾರ ಬ್ರಿಟಿಷ್ ಸೈನ್ಯದೊಂದಿಗೆ ಕಾರನ್ ವಾಲಿಸ್ ಬೆಂಗಳೂರಿಗೆ ಮುತ್ತಿಗೆ ಹಾಕಿದ್ದು ಹಾಗೂ ನಿರ್ಣಾಯಕ ಯುದ್ಧ ನಡೆದದ್ದು.ಬ್ರಿಟಿಷ್ ಸೇನಾಧಿಕಾರಿ ಕರ್ನಲ್ ಮೂರ್ ಹೌಸ್ ಹಾಗೂ ಇನ್ನೂ ಅನೇಕ ಬ್ರಿಟಿಷ್ ಉಪಸೇನಾಪತಿಗಳು ಈ ಆಕ್ರಮಣದಲ್ಲಿ ಜೀವ ಕಳೆದುಕೊಂಡರು.

ಪರಕೀಯರ ಆಕ್ರಮಣ ತಾರಕಕ್ಕೇರಿದಾಗ ದಕ್ಷಿಣ ಭಾರತದಲ್ಲಿ ಇದಕ್ಕೆ ತಡೆಗೋಡೆಯಾಗಿ ನಿಂತದ್ದು ವಿಜಯನಗರ ಸಾಮ್ರಾಜ್ಯ. ವಿಜಯನಗರದ





ಬೆಂಗಳೂರು ಕೋಟೆಯನ್ನು ವಶಪಡಿಸಿಕೊಳ್ಳುತ್ತಿರುವ ಬ್ರಿಟಿಷ್ ಸೈನ್ಯದ ಕಾಲ್ಪನಿಕ ಚಿತ್ರ

ಕಾರಣದಿಂದಾಗಿ ದಕ್ಷಿಣ ಭಾರತದಲ್ಲಿ ನಮ್ಮ ಸಂಸ್ಕೃತಿ ಉಳಿಯಿತು–ಅರಳಿತು. ಕೆಂಪೇಗೌಡರು ವಿಜಯನಗರದ ಸಾಮಂತರಾಗಿದ್ದ ಕಾರಣ ಸಹಜವಾಗಿ ವಿಜಯನಗರದ ಸಂಸ್ಕೃತಿಯ ಪ್ರತಿಬಿಂಬದಂತೆ ಬೆಂಗಳೂರು ಇತ್ತು. ನಾಡಪ್ರಭುಗಳು ಬೆಂಗಳೂರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಬೆಂಗಳೂರಿನ ಪರಿಸರದಲ್ಲಿ ಸುಮಾರು ಒಂದು ಶತಮಾನ ಈ ನೆಲದ ಸಂಸ್ಕೃತಿಯನ್ನು ಉಳಿಸಿ–ಬೆಳಸಿದ್ದರು.

## ೩. ಹಲಸೂರು : ಆಧ್ಯಾತ್ಮಿಕ ಕೇಂದ್ರ

ಬೆಂಗಳೂರು ಪರಿಸರದ ಭೌಗೋಳಿಕ ಹಿನ್ನಲೆಯು ಪ್ರಾಚೀನ ಕಾಲದಿಂದಲೂ ಹಲವು ಧಾರ್ಮಿಕ ಕೇಂದ್ರಗಳನ್ನು ಒಳಗೊಂಡಿದೆ. ಅವುಗಳ ಪೈಕಿ ಹಲಸೂರು ಒಂದು. ಬೆಂಗಳೂರು ಕೋಟೆಯಿಂದ ಈಶಾನ್ಯಕ್ಕೆ ಸುಮಾರು ೫ ಕಿ.ಮಿ ದೂರದಲ್ಲಿರುವ ಪ್ರಾಚೀನ ಊರೇ ಹಲಸೂರು. ಬೆಂಗಳೂರು ಸ್ಥಾಪನೆಗೂ ಪೂರ್ವದ ನೆಲೆಯಾಗಿರುವ ಹಲಸೂರು ದಕ್ಷಿಣ ಪಿನಾಕಿನಿ ನದಿಯ



(ಹಲಸೂರು ಕೆರೆಯ ಚಿತ್ರ )



ಕಣಿವೆಯಲ್ಲಿದೆ. ಹಲಸೂರು ಪರಿಸರವು ವಿಶಾಲ ಮೈದಾನವನ್ನು ಒಳಗೊಂಡಿದ್ದು, ಈ ಊರಿನ ಎಡಭಾಗದಲ್ಲಿ ವಿಶಾಲವಾದ ಕೆರೆ ಇದೆ.

ಹಲಸೂರಿನ ಸೋಮೇಶ್ವರ ದೇವಾಲಯ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಹಲಸೂರಿನ ಹೃದಯಭಾಗದಲ್ಲಿರುವ ವಿಶಾಲವಾದ ಸೋಮೇಶ್ವರ ದೇವಾಲಯವು ಸುಪ್ರಸಿದ್ಧವಾದುದು. ಊರಿನ ಎಲ್ಲಾ ರಸ್ತೆಗಳು ಈ ದೇವಸ್ಥಾನದ ಬಳಿಯಲ್ಲಿ ಸಂಧಿಸುತ್ತವೆ. ವಿಜಯನಗರ ಕಾಲದ ದೇವಾಲಯಗಳಿಗೆ ಇರುವಂತೆ ಈ ದೇವಸ್ಥಾನದ ಮುಂಭಾಗದಲ್ಲಿ ಉದ್ದವಾದ ಬಜಾರು ಬೀದಿಯನ್ನು ನಿರ್ಮಿಸಲಾಗಿದೆ.



(ಹಲಸೂರಿನ ದೇವಸ್ಥಾನ)

ಹಲಸೂರು ಊರಿನ ಪೂರ್ವದ ಅಂಚಿನಲ್ಲಿ ಜೋಗುಪಾಳ್ಯ ಎಂಬ ಚಿಕ್ಕ ಪಾಳ್ಯವಿತ್ತು. ಈ ಗ್ರಾಮದಲ್ಲಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನವಿದೆ. ಸೋಮೇಶ್ವರ ಮತ್ತು ಜೋಗುಪಾಳ್ಯದ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಗಳು ಹಲಸೂರಿನ ಪರಿಸರವನ್ನು ಶೈವಾರಾಧನೆಯ ಕೇಂದ್ರವಾಗಿ ರೂಪಿಸಿದವು.

ಬ್ರಿಟಿಷರ ಕಂಟೋನ್ಮೆಂಟ್ (ದಂಡು ಪ್ರದೇಶ) ಸ್ಥಾಪನೆಯೊಂದಿಗೆ ಹಲಸೂರು ಪರಿಸರವು ತೀವ್ರವಾಗಿ ಆಧುನಿಕ ಜೀವನ ಶೈಲಿ ಹಾಗೂ ನಗರೀಕರಣಕ್ಕೆ ಒಳಪಟ್ಟಿತು. ತನ್ನ ಪಕ್ಕದಲ್ಲಿಯೇ ಐರೋಪ್ಯ ಸಂಸ್ಕೃತಿ ಬೆಳೆಯುತ್ತಿದ್ದರೂ ತನ್ನ ಸಾಂಪ್ರದಾಯಿಕ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವ ಪ್ರಯತ್ನ ವಿಶೇಷವೆನಿಸಿದೆ.

❑

## ೪. ಶಹಾಜಿ ಆಳ್ವಿಕೆ : ಸ್ವತ್ತ್ವಕ್ಕೆ ಆದ್ಯತೆ

೧೫೬೫ರಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡ ನಂತರ ಅದರ ಪ್ರಭಾವ ಕ್ಷೀಣಿಸುತ್ತಾ ಬಂದಿತು. ವಿಜಯನಗರದ ಸಾಮಂತ ರಾಜ್ಯಗಳ ಮೇಲೂ ಧಾಳಿಗಳು ನಡೆಯುತ್ತಾ ಹೋದವು. ೧೬೩೮ರಲ್ಲಿ ಬಿಜಾಪುರದ ಅದಿಲ್ ಶಹಾನು ತನ್ನ ಸೇನಾಧಿಕಾರಿ ರಣದುಲ್ಲಾಹ್ ಖಾನ್ ನೇತೃತ್ವದ ಸೇನೆಯನ್ನು ಬೆಂಗಳೂರಿಗೆ ಕಳುಹಿಸಿದನು. ಇವರ ಜೊತೆ ಶಹಾಜಿ ಕೂಡ ಬಂದಿರುತ್ತಾರೆ. ಬಿಜಾಪುರದ ಬಹುದೊಡ್ಡ ಸೈನ್ಯವು ಬೆಂಗಳೂರನ್ನು ಮುತ್ತಿಗೆ ಹಾಕಿ ಅಪಾರ ಹಾನಿಯನ್ನು ಉಂಟು ಮಾಡಿತು.

ಇಮ್ಮಡಿ ಕೆಂಪೇಗೌಡರು ಈ ಯುದ್ಧದಲ್ಲಿ ಹಿನ್ನಡೆಯಾದಾಗ ಒಪ್ಪಂದಕ್ಕಾಗಿ ಹೇಳಿಕಳುಹಿಸಿದರು. ಈ ಒಪ್ಪಂದದ ಪ್ರಕಾರ ಇಮ್ಮಡಿ ಕೆಂಪೇಗೌಡರು ತಮ್ಮ ರಾಜಧಾನಿಯನ್ನು ಸಾವನದುರ್ಗದ ಹತ್ತಿರದ ಮಾಗಡಿಗೆ ಸ್ಥಳಾಂತರಿಸಿದರು. ಬಿಜಾಪುರ ಆಡಳಿತಕ್ಕೆ ಬೆಂಗಳೂರು ಒಳಪಡುತ್ತಿದ್ದಂತೆ ಇದನ್ನು ಮರಾಠ ಸರದಾರ ಶಹಾಜಿ ಭೋಂಸ್ಲೆ ಅವರಿಗೆ ನೀಡಿ ಅವರನ್ನು ಜಹಗೀರದಾರರನ್ನಾಗಿ ನೇಮಿಸಲಾಯಿತು.

ಶಹಾಜಿಯವರ ಆಳ್ವಿಕೆಯಲ್ಲಿ ಬಿಜಾಪುರದ ಪ್ರಭಾವ ಬೆಂಗಳೂರಿನ ಮೇಲೆ ಸಾಕಷ್ಟು ಕಡಿಮೆಯಾಯಿತು. ಯುದ್ಧದ ಸಂಧರ್ಭದಲ್ಲಿ ಕೋಟೆಗೆ ಆದ ಹಾನಿಯನ್ನು ಮೊದಲು ಶಹಾಜಿಯವರು ರಿಪೇರಿ ಮಾಡಿಸಿದರು. ಆಗ ಬೆಂಗಳೂರಿನಲ್ಲಿ ೯ ಪ್ರಮುಖ ಕೆರೆಗಳು ಮತ್ತು ಶಿವ, ವಿಷ್ಣು, ಧರ್ಮರಾಯನ ದೇವಸ್ಥಾನಗಳ ಉಲ್ಲೇಖ ಬರುತ್ತದೆ.

ಶಹಾಜಿ ಅಧಿಕಾರಕ್ಕೆ ಬಂದ ಕೂಡಲೇ ಮಾಡಿದ ಮೊದಲ ಕೆಲಸವೆಂದರೆ ಅಂದಿನ ಕರ್ನಾಟಕದಲ್ಲಿ ತಾಂಡವವಾಡುತ್ತಿದ್ದ ಅಂತ:ಕಲಹಗಳನ್ನು ಕೊನೆಗಾಣಿಸಿದುದು. ವಿಜಯನಗರ ಸಾಮ್ರಾಜ್ಯ ಪತನವಾಗಿ ದಿನೇ ದಿನೇ ಅದರ ಪ್ರಭಾವ ಕಡಿಮೆ ಆದದ್ದರಿಂದ ಎಲ್ಲೆಡೆ ಅಭದ್ರತೆ ಮೂಡಿತ್ತು. ಪಾಳೇಯಗಾರರ ಮಧ್ಯೆ ದ್ವೇಷಾಸೂಯೆಗಳು ತಲೆದೋರಿ ಆಗಾಗ್ಗೆ ಪರಸ್ಪರ ಹೊಡೆದಾಡುತ್ತಿದ್ದರು. ಶಹಾಜಿ ಸೈನ್ಯ ಸಮೇತನಾಗಿ ಅಲ್ಲಲ್ಲಿ ಸಂಚರಿಸಿ ಕೊಬ್ಬಿದ ಪಾಳೇಯಗಾರರ ಸೊಕ್ಕನ್ನು ಅಡಗಿಸಿದರು. ಕ್ರಮೇಣ ಬೆಂಗಳೂರಿನಲ್ಲಿ ಶಾಂತಿ ನೆಲಸಿತು. ಶಹಾಜಿಯ ರಾಜ್ಯಾಡಳಿತದಿಂದ ಒಂದು ವಿಧವಾದ ನೆಮ್ಮದಿ ನೆಲೆಸುವುದೆಂಬ ಆಶಾಭಾವನೆ ಜನತೆಯಲ್ಲಿ ಮೂಡಲಾರಂಭಿಸಿತು.

ಶಹಾಜಿ ಭೋಂಸ್ಲೆ ಬಿಜಾಪುರದ ಸುಲ್ತಾನನ ಅಧೀನನಾಗಿದ್ದರೂ ಅವನ ನರ–ನಾಡಿಗಳಲ್ಲಿ ಭಾರತೀಯತೆಯೇ ಹರಿಯುತ್ತಿತ್ತು. ಮಹಾರಾಷ್ಟ್ರದ ಹಿಂದಿನ ವೀರಾಧಿವೀರರ ಸಾಹಸಕಾರ್ಯಗಳನ್ನು ಬಲ್ಲವನಾಗಿದ್ದರು. ಪರಂಪರಾಗತವಾಗಿ ಬಂದಂತಹ ದೇಶಭಿಮಾನ, ದೇಶಭಕ್ತಿಗಳನ್ನು ಮೈಗೂಡಿಸಿಗೊಂಡಿದ್ದರು.

ಬೆಂಗಳೂರಿನಲ್ಲಿ ಅದಿಲಶಾಹಿ ಪ್ರಭಾವದ ಬದಲು ಮರಾಠರ ಮೂಲಕ ಭಾರತೀಯ ಸಂಸ್ಕೃತಿ ಅರಳಲು ಸಹಕಾರವಾಯಿತು. ಶಹಾಜಿ ಆಸ್ಥಾನದಲ್ಲಿ ಅನೇಕ ಕವಿಗಳು, ಸಂಗೀತಗಾರರು ಹಾಗು ಸಂತರು ಆಶ್ರಯ ಪಡೆದರು. ಬಹುಭಾಷಾ ಪಂಡಿತ ಜಯರಾಂ ಪಿಂಡ್ಯಾ ದೂರದ ನಾಸಿಕನಿಂದ ಬೆಂಗಳೂರಿಗೆ ಬಂದರು. ಮಲ್ಹಾರಿ ಭಟ್ಟ, ನರೋಪಂತ ಹನುಮಂತೆ ಮತ್ತಿತರ ಕವಿಗಳು ಶಹಾಜಿ ಆಸ್ಥಾನದಲ್ಲಿ ಸಾಹಿತ್ಯೋಪಾಸನೆ ಮಾಡಿದವರು.

ಬಿಜಾಪುರದ ಸರ್ಕಾರಿ ರೆವೆನ್ಯೂ ಲೆಕ್ಕಗಳು ಪರ್ಶಿಯನ್ ಭಾಷೆಯಲ್ಲಿಯೇ ಇರುತ್ತಿತ್ತು. ಶಹಾಜಿಯ ಕಾಲದಲ್ಲಿ ಈ ವಿದೇಶಿ ಪರ್ಶಿಯನ್ ಬದಲಾಗಿ ಭಾರತೀಯ ಭಾಷೆಗಳಾದ ಸಂಸ್ಕೃತ ಮತ್ತು ಮರಾಠಿ ಎರಡೂ ಭಾಷೆಗಳಿಗೆ ಪ್ರೋತ್ಸಾಹ ಸಿಕ್ಕಿತು. ಮರಾಠಿ ಭಾಷೆ ಹೆಚ್ಚು ಬಳಕೆಯಲ್ಲಿದ್ದರೂ ಶಿಲಾಶಾಸನಗಳೆಲ್ಲವೂ ಕನ್ನಡದಲ್ಲಿಯೇ ಇರುತ್ತಿದ್ದವು. ಪರ್ಶಿಯನ್ ಭಾಷೆಯಲ್ಲಿದ್ದ



ವಿವಿಧ ಹುದ್ದೆಗಳ ಹೆಸರು ಶಿರಸ್ತೇದಾರ್, ಅಮಲ್ದಾರ್, ರಿಸಾಲ್ದಾರ್ ಹೋಗಿ ಭಾರತೀಯ ಶಬ್ಧಗಳು ದೇಶಪಾಂಡೆ, ದೇಶಮುಖ್, ಕುಲ್ಕರ್ಣಿ ಬಳಕೆಗೆ ಬಂದವು.

೧೬೭೦ರಲ್ಲಿ ಪರಮಾನಂದ (ಸದಾಶಿವ ಮಹಾದೇವ) ನಿಂದ ರಚಿತವಾದ "ಶಿವ ಭಾರತ" ದಲ್ಲಿ ಬೆಂಗಳೂರು ಹೇಗಿತ್ತು ಎಂಬ ವರ್ಣನೆ ಸುಂದರವಾಗಿ ಮೂಡಿಬಂದಿದೆ: "ಈ ಬೆಂಗಳೂರು ಎಂಬ ನಗರವು ಭಾರೀ ಕೋಟೆಗಳಿಂದಲೂ, ಆಳವಾದ ಕಂದಕಗಳಿಂದಲೂ ಕೂಡಿದ್ದು ಆಕರ್ಷಕ ನಗರವಾಗಿತ್ತು. ಕೋಟೆಯ ಗೋಡೆಗಳು ಭದ್ರವಾಗಿದ್ದವು. ಕೋಟೆಯ ಸುತ್ತಲೂ ದೊಡ್ಡ ಕೆರೆಗಳಿದ್ದವು. ಈ ನಗರದಲ್ಲಿ, ದೇವಾಲಯಗಳು ದೊಡ್ಡದಾಗಿರುವುದಲ್ಲದೇ ಅಂದವಾಗಿಯೂ ಇವೆ. ಈ ದೇವಸ್ಥಾನಗಳಲ್ಲಿರುವ ಕಂಬಗಳ ಮೇಲೆ ಸೊಗಸಾದ ವಿಗ್ರಹಗಳನ್ನು ಬಿಡಿಸಿರುವುದು ನಿಜವಾಗಿಯೂ ಆಕರ್ಷಕ ಹಾಗೂ ಮನೋಹರವಾಗಿದೆ..."

ನಮ್ಮ ದೇಶದ ಬಹುತೇಕ ಸ್ಥಳಗಳಲ್ಲಿ ಪರಕೀಯರ ಆಕ್ರಮಣಗಳಿಂದಾಗಿ ನಮ್ಮ ಅನೇಕ ದೇವಸ್ಥಾನಗಳು ಉಧ್ವಸ್ಥವಾದವು, ವಿರೂಪಗೊಂಡವು. ಬಿಜಾಪುರದ ಆದಿಲ್ ಶಹಾನಿಗೇ ಸೇರಿದ್ದಾಗ್ಯೂ ಬೆಂಗಳೂರಿನಲ್ಲಿ ಈ ರೀತಿ ಆಗದಿರುವುದು ವಿಶೇಷವಾಗಿ ಇಲ್ಲಿ ಗಮನಿಸಬೇಕು. ಇದಕ್ಕೆ ಶಹಾಜಿ ಮಹಾರಾಜರ ಆಳ್ವಿಕೆಯೇ ಕಾರಣ.

❑

## ೫. ಬಾಲಕ ಶಿವಾಜಿ : ಭವ್ಯ ಕನಸಿಗೆ ತಯಾರಿ

ಶಹಾಜಿ ಬೆಂಗಳೂರು ನಗರದಲ್ಲೇ ಸಂಸಾರ ಸಮೇತ ವಾಸವಾಗಿದ್ದು, ಅನೇಕ ಮಹತ್ಕಾರ್ಯಗಳನ್ನು ಮಾಡಿದ್ದಾರೆ. ಶಹಾಜಿಗೆ ಇಬ್ಬರು ಪತ್ನಿಯರು ಜೀಜಾಬಾಯಿ ಹಾಗೂ ತುಕಾಬಾಯಿ ಮೋಹಿತೆ. ಜೀಜಾಬಾಯಿಗೆ ಇಬ್ಬರು ಮಕ್ಕಳು – ಸಂಭಾಜಿ ಮತ್ತು ಶಿವಾಜಿ; ತುಕಾಬಾಯಿ ಅವರಿಂದ ಇಬ್ಬರು ಮಕ್ಕಳು – ವೆಂಕೋಜಿ ಹಾಗೂ ರಾಜಾರಾಮ.

ಶಹಾಜಿಯು ಶೂರ ಸರದಾರ ಆದರೆ, ಪರಕೀಯರ ಸೇವೆ ಮಾಡಿ ಚೆನ್ನಾಗಿ ಕೈ ಸುಟ್ಟಿಕೊಂಡಿದ್ದರು. ಆದ್ದರಿಂದ ತನ್ನ ಮಕ್ಕಳಾದರೂ ಸ್ವಾತಂತ್ರ್ಯ–ಸ್ವಾಭಿಮಾನಗಳ ಗಾಳಿ ನೀರು ಮೈಯುಂಡು ಬೆಳೆಯಲೆಂದು ಅವರ ಅಭಿಲಾಶೆ. ಅದಕ್ಕಾಗಿ ತನ್ನ ಹಿರಿಯ ಮಗ ಸಂಭಾಜಿಯನ್ನು ತನ್ನ ಬಳಿ ಬೆಂಗಳೂರಿನಲ್ಲಿಟ್ಟುಕೊಂಡು ತರಭೇತಿ ನೀಡಿದರು. ತನ್ನ ಎರಡನೆಯ ಮಗ ಶಿವಾಜಿ ಇನ್ನೊಂದು ಕಡೆ ಸ್ವತಂತ್ರವಾಗಿ ಬೆಳೆಯಲೆಂದು ಶಿವನೇರಿಯಿಂದ ಪುಣೆಗೆ ಕಳುಹಿಸಲು ನಿರ್ಧರಿಸಿದರು. ಶಹಾಜಿಗಿದ್ದ ಜಹಗೀರುಗಳಲ್ಲಿ ಪುಣೆಯೂ ಒಂದಾಗಿತ್ತು. ಪುಣೆ ಆಗ ಮುಸಲ್ಮಾನರ ಹಾವಳಿಯಿಂದ ಪಾಳುಬಿದ್ದ ಊರಾಗಿತ್ತು. ಎಲ್ಲಿ ನೋಡಿದರಲ್ಲಿ ಧ್ವಂಸವಾದ ದೇವಸ್ಥಾನಗಳು, ಮಠಮಂದಿರಗಳು, ಭಗ್ನಾವಶೇಷಗಳು ಇದ್ದವು. ಇದೆಲ್ಲವನ್ನು ನೋಡಿದ ಶಿವಾಜಿಗೆ ಅನೇಕ ಪ್ರಶ್ನೆಗಳೇಳುತ್ತಿದ್ದವು ಇವೆಲ್ಲಾ ಹೇಗಾಯಿತು? ಯಾರು ಮಾಡಿದವರು? ಇದಕ್ಕೆ ಉತ್ತರಿಸುವರು ಯಾರು?. ಜೀಜಾಮಾತೆಯ ಸಂಸ್ಕಾರ ಅವನ ಮೇಲೆ ತುಂಬಾ ಪರಿಣಾಮ ಬೀರಿದವು.

ಶಿವಾಜಿಯು ಬಾಲಕನಾಗಿದ್ದಾಗ ಎರಡು ವರ್ಷಗಳ ಕಾಲ(೧೬೪೦–೪೨) ಬೆಂಗಳೂರಿನಲ್ಲಿ ತನ್ನ ತಂದೆಯ ಜೊತೆ ಕಳೆಯುತ್ತಾನೆ.ಆಗ



ಜೀಜಾಮಾತೆಯೂ ಶಿವಾಜಿಯೊಂದಿಗೆ ಬೆಂಗಳೂರಿಗೆ ಬಂದಿರುತ್ತಾರೆ.ಅದೇ ಸಮಯದಲ್ಲಿ ಸಯೀಬಾಯಿ ಎಂಬ ಕನ್ಯೆಯ ಜೊತೆ ಶಿವಾಜಿ ವಿವಾಹವಾಯಿತು. ಶಿವಾಜಿಗೆ ಬೆಂಗಳೂರಿನ ಪರಿಚಯ ಚೆನ್ನಾಗಿ ಆಯಿತು. ಇಲ್ಲಿ ಅವನ ಸೃಜನಾತ್ಮಕ ಪ್ರತಿಭೆ ಅರಳಲು ಒಳ್ಳೆಯ ವಾತಾವರಣ ದೊರೆಯಿತು.

ಶಹಾಜಿ ರಾಜರು ಬಿಜಾಪುರದ ಅದಿಲ್ ಶಾಹನ ಅಂಕಿತಕ್ಕೆ ಒಳಪಟ್ಟಿದ್ದರೂ ತಮ್ಮ ಆಳ್ವಿಕೆಯಲ್ಲಿದ್ದ ಬೆಂಗಳೂರನ್ನು ಬಹುಮಟ್ಟಿಗೆ ಸ್ವತಂತ್ರ ಹಿಂದೂ ರಾಜ್ಯದಂತೆ ಪೋಷಿಸಿಕೊಂಡು ಬಂದಿದ್ದರು. ವಿಜಯನಗರದ ಆದರ್ಶ ಹಿಂದೂ ರಾಜ್ಯದ ಸುಗಂಧವನ್ನು ಬೆಂಗಳೂರಿನಲ್ಲಿ ಇನ್ನೂ ಉಸಿರಾಡಬಹುದಿತ್ತು. ಶಹಾಜಿ ರಾಜಸಭೆಯಂತೂ ವಿಜಯನಗರದ್ದೆ ಸಣ್ಣದೊಂದು ಪ್ರತಿಬಿಂಬ. ಅವನ ಅರಮನೆಯಲ್ಲಿ ಹವನ–ಹೋಮಗಳು, ದೇವಕಾರ್ಯ, ಧರ್ಮಕಾರ್ಯಗಳು, ವಿದ್ವತ್ ಸಭೆ, ವೇದಘೋಷಗಳು ನಡೆಯುತ್ತಿದ್ದವು. ಹಿಂದೂ ಸಂಪ್ರದಾಯಗಳು ಶಹಾಜಿ ಜೀವನದ, ದಿನಚರಿಯ ಹಾಸುಹೊಕ್ಕಾಗಿದ್ದವು. ಬಾಲಕ ಶಿವಾಜಿಗೆ ಅರಮನೆಯ ಈ ಹಿಂದುತ್ತ್ವದ ಪರಿಸರ ಚೆನ್ನಾಗಿ ಒಗ್ಗಿತು, ಹೃದಯದಲ್ಲಿ ಶಕ್ತಿ ತುಂಬಿತು.

ಆಗ ಮಹಾರಾಷ್ಟ್ರದಲ್ಲಾಗಲೀ ಅಥವಾ ಉತ್ತರದಲ್ಲಿ ಸ್ವತಂತ್ರವಾಗಿ ಉಳಿದಿದ್ದ ಕೆಲವು ಹಿಂದೂ ರಾಜ್ಯಗಳಲ್ಲೂ ಬೆಂಗಳೂರಿನಷ್ಟು ಒಳ್ಳೆಯ ವಾತಾವರಣ ಇರಲಿಲ್ಲ. ಹಿಂದೂ ಸಂಸ್ಥಾನದ ರಾಜ್ಯ ವ್ಯವಹಾರದ ನೀತಿ–ರೀತಿಗಳು, ಆಸ್ಥಾನದ ಸ್ವರೂಪ, ಸಂಸ್ಕೃತಿ, ಶಬ್ದಾವಳಿ ಎಲ್ಲವೂ ಮೊಘಲರ ಅಗ್ಗದ ನಕಲಾಗಿದ್ದವು. ಆದ್ದರಿಂದ ಹಿಂದೂ ಸ್ವರಾಜ್ಯದ ಭವ್ಯ ಕಲ್ಪನೆ ಶಿವಾಜಿಯಲ್ಲಿ ಅರಳಲು ಬೆಂಗಳೂರು ಬಹಳ ದೊಡ್ಡ ಕೊಡುಗೆ ಕೊಟ್ಟಿರುವುದರಲ್ಲಿ ಸಂದೇಹವಿಲ್ಲ.

ಶಿವಾಜಿಯ ವೆಲ್ಲೂರಿನ ಅಭಿಯಾನದ ಸಮಯದಲ್ಲಿ ಅವರ ಗುರುಗಳಾಗಿದ್ದ ಸಮರ್ಥ ರಾಮದಾಸರಿಂದ ಬೆಂಗಳೂರಿನ ವಸಂತಪುರದಲ್ಲಿ ಭವಾನಿ ಶಂಕರ ದೇವಸ್ಥಾನ ಸ್ಥಾಪನೆಯಾದದ್ದು ವಿಶೇಷ.

ಮುಂದೆ ಶಹಾಜಿಯ ಮಗ ವೆಂಕೋಜಿಯ ಆಳ್ವಿಕೆಯಲ್ಲೂ ಬೆಂಗಳೂರು ತನ್ನತನ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ನೆರವಾದವು. ಅನೇಕ ದೇವಸ್ಥಾನಗಳು ನಿರ್ಮಾಣ ಮಾಡಿದವರು ವೆಂಕೋಜಿ. ವೆಂಕೋಜಿ ತಂಜಾವೂರಿಗೆ ಸ್ಥಾನಾಂತರವಾಗಿ ಬೆಂಗಳೂರಿನ ಮಾರಾಟದ ಬಗ್ಗೆ ಚಿಂತನೆ ನಡೆದಾಗ ಶಿವಾಜಿಯ ಆಗಮನವಾಗಿ ವೆಂಕೋಜಿಯ ಧರ್ಮಪತ್ನಿ ದೀಪಾಬಾಯಿಯ ಹೆಸರಿಗೆ ಬೆಂಗಳೂರನ್ನು ಹಸ್ತಾಂತರಿಸುತ್ತಾರೆ.

ಶಿವಾಜಿಗೆ ತನ್ನ ಸ್ವರಾಜ್ಯದ ಧ್ಯೇಯಸಾಧನೆಗೆ ಪ್ರಾರಂಭದ ದಿನಗಳಲ್ಲಿ ತಳಪಾಯ ಹಾಕಿಕೊಟ್ಟ ಬೆಂಗಳೂರಿನ ಬಗ್ಗೆ ವಿಶೇಷ ಅಭಿಮಾನ–ಕಾಳಜಿಗಳು ಕಡೆಯ ತನಕ ಇದ್ದವು.

ಮುಂದೆ ಬೆಂಗಳೂರು ೧೬೯೦ರಲ್ಲಿ ಚಿಕ್ಕದೇವರಾಜ ಒಡೆಯರ್ ಅವರ ವಶವಾಯಿತು. ಅವರಿಂದ ಬೆಂಗಳೂರಿನ ಆಡಳಿತವು ಟಿಪ್ಪು ಸುಲ್ತಾನನ ಕೈ ಸೇರಿತು.

❑

## ೬. ಕಂಟೋನ್ಮೆಂಟ್ : ಬ್ರಿಟಿಷರ 'ದಂಡು' ನೆಲೆ

೧೭೯೧ರ ಆಂಗ್ಲೋ ಮೈಸೂರಿನ ಯುದ್ಧ ಬೆಂಗಳೂರಿನ ಮಟ್ಟಿಗೆ ಬಹಳ ಮಹತ್ತ್ವದ್ದು. ಇದು ಬೆಂಗಳೂರಿನ ಚರಿತ್ರೆಯನ್ನಷ್ಟೇ ಅಲ್ಲ ಭೌಗೋಳಿಕ ವ್ಯಾಪ್ತಿಯನ್ನೇ ಬದಲಾಯಿಸಿತು. ಈ ಯುದ್ಧದಲ್ಲಿ ಟಿಪ್ಪು ಸುಲ್ತಾನನು ಸೋತಾಗ, ಬೆಂಗಳೂರು ಬ್ರಿಟಿಷರ ತೆಕ್ಕೆಗೆ ಬಂದಿತು. ಯುದ್ಧಕ್ಕೆ ಬಂದಾಗ ಬ್ರಿಟಿಷರು ತಮ್ಮ ಸೈನ್ಯದ ಜಮಾವಣೆ ಮಾಡಿದ್ದು ಬೆಂಗಳೂರಿನ ಪೂರ್ವದ ಹಲಸೂರು, ಮಾವಳ್ಳಿಗಳಲ್ಲಿ. ಮುಂದೆ ಇದೇ ಪ್ರದೇಶದಲ್ಲಿ ಕಂಟೋನ್ಮೆಂಟ್ (ದಂಡು ಪ್ರದೇಶ) ಮಾಡಲು ನಿರ್ಧರಿಸಿದರು.

ಕಂಟೋನ್ಮೆಂಟ್ ಅಥವಾ ದಂಡು ಪ್ರದೇಶ ಅಂದರೆ ಸೈನ್ಯದ ದಳಗಳಿಗೆ ಗೊತ್ತು ಮಾಡಿರುವ ವಾಸಸ್ಥಾನ. ಬ್ರಿಟೀಷರು ೧೭೯೯ರಲ್ಲಿ ಟಿಪ್ಪು ಸುಲ್ತಾನನನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಶಕ್ಕೆ ತೆಗೆದುಕೊಂಡ ನಂತರ ಟಿಪ್ಪುವಿನ ಅಳಿದುಳಿದ ಸೈನಿಕರು ಪುನಃ ಸಂಘಟಿತರಾಗಿ ತಮ್ಮ ವಿರುದ್ಧ ದಂಗೆ ಏಳಬಾರದು ಎಂಬ ಉದ್ದೇಶದಿಂದ, ಶ್ರೀರಂಗಪಟ್ಟಣದಲ್ಲೇ ತಮ್ಮ ಕಂಟೋನ್ಮೆಂಟನ್ನು ಸ್ಥಾಪಿಸಿದರು. ಆದರೆ, ಶ್ರೀರಂಗಪಟ್ಟಣದ ಸೊಳ್ಳೆಯ ಕಾಟವನ್ನು ತಡೆಯಲಾಗಲಿಲ್ಲ ಹಾಗಾಗಿದಂಡು ಪ್ರದೇಶವನ್ನು ಬೆಂಗಳೂರಿಗೆ ವರ್ಗಾಯಿಸುವ ಯೋಚನೆ ಪ್ರಾರಂಭವಾಯಿತು.

ದಂಡು ಪ್ರದೇಶದ ನಿರ್ಮಾಣದ ಪ್ರಮುಖ ಉದ್ದೇಶವು ಬ್ರಿಟಿಷ್ ಸೈನ್ಯದ ಸುರಕ್ಷತೆ ಹಾಗೂ ತಮ್ಮ ವಶದಲ್ಲಿರುವ ಪ್ರದೇಶಗಳ ಸ್ಥಳೀಯರು ಅಥವಾ ಅರಸರು ಪುನಃ ದಂಗೆ ಏಳದಂತೆ ತಮ್ಮ ಅಂಕೆಯಲ್ಲಿಟ್ಟುಕೊಳ್ಳುವುದು ಎಂಬುದಾಗಿತ್ತು. ಬೆಂಗಳೂರಿನ ಹವಾಗುಣ, ಪ್ರಶಾಂತತೆ ಜೊತೆಗೆ ಮೈಸೂರು ಸಂಸ್ಥಾನಕ್ಕೆ ಮತ್ತು ಮದ್ರಾಸ ಪ್ರಾಂತಕ್ಕೆ ಹೆಬ್ಬಾಗಿಲಂತಿರುವುದೂ ಇಲ್ಲಿನ ಆಯ್ಕೆಗೆ

ಮುಖ್ಯ ಕಾರಣವಾಯಿತು.ಬೆಂಗಳೂರಿನಿಂದ ಮೈಸೂರು, ಮಂಗಳೂರು, ಚಿತ್ರದುರ್ಗ ಅಥವಾ ಮಲಬಾರ ಪ್ರದೇಶಗಳಿಗೆ ಬ್ರಿಟೀಷ್ ಸೈನ್ಯವನ್ನು ತಕ್ಷಣ ರವಾನಿಸಬಹುದಿತ್ತು. ಹಾಗಾಗಿ ಇದೊಂದು ಆಯಕಟ್ಟಿನ ಸ್ಥಾನ ಎಂಬುದೂ ಮಹತ್ತ್ವದ ಕಾರಣವಾಗಿತ್ತು.

ಬ್ರಿಟೀಷರು ಮೈಸೂರು ಮಹಾರಾಜರಿಂದ ಹಳೆಯ ಬೆಂಗಳೂರಿನ ಆಚೆ ೯೦೦೦ ಎಕರೆ ಪ್ರದೇಶವನ್ನು ಪಡೆದರು. ದಂಡುಪ್ರದೇಶದ ಜಾಗದಲ್ಲಿ ವಸ್ತುತ: ಕೆಲವು ಹಳ್ಳಿಗಳಿದ್ದು ಉಳಿದೆಲ್ಲ ಬಹುತೇಕ ಬಯಲು ಪ್ರದೇಶಗಳೇ ಇದ್ದವು. ಪ್ರಾರಂಭಿಕವಾಗಿ ಹಲಸೂರು ಹಾಗೂ ದೊಮ್ಮಲೂರು ಬಳಿಯ ಎರಡು ಪ್ರತ್ಯೇಕ ಸೇನಾ ನೆಲೆಗಳಿಗೆ ಮಾತ್ರ ಸೀಮಿತವಾಗಿದ್ದು, ಇದು ಕ್ರಮೇಣ ವಿಸ್ತಾರಗೊಂಡಿತು. ೩೪ ಚದುರ ಕಿ.ಮೀ ವಿಸ್ತೀರ್ಣದ ಬ್ರಿಟಿಷ್ ಕಂಟೋನ್ಮೆಂಟ್ ಇಂದಿನ ರಾಜಭವನದಿಂದ ಎನ್.ಜಿ.ಇ.ಎಫ್ (ಬಿನ್ನಮಂಗಲ)ವರೆಗೂ ಹಾಗೂ ದಕ್ಷಿಣದಲ್ಲಿ ಅಗರ ಗ್ರಾಮದಿಂದ ಉತ್ತರದಲ್ಲಿ ಟ್ಯಾನರಿ ರಸ್ತೆಯವರೆಗೂ ವಿಸ್ತಾರವಾಗಿತ್ತು. ಹಳೆಯ ಬೆಂಗಳೂರು, ಮೈಸೂರಿನ ಸಂಸ್ಥಾನಕ್ಕೆ ಒಳಪಟ್ಟಿದ್ದರೆ, ಕಂಟೋನ್ಮೆಂಟ್ ಪ್ರದೇಶವು ಮದ್ರಾಸ್ ಸರ್ಕಾರಕ್ಕೆ ಸೇರಿತ್ತು.

ಈ ಕಂಟೋನ್ಮೆಂಟ್ನಲ್ಲಿ ಬ್ರಿಟಿಷ್ ಅಥವಾ ಐರೋಪ್ಯ ಜನಾಂಗದ ಸೈನ್ಯ ಮತ್ತು ದೇಶೀಯ ಸೈನ್ಯ (ನೇಟಿವ್ ಟ್ರೂಪ್) ಎಂಬ ಎರಡು ದೊಡ್ಡ ಬ್ರಿಟಿಷ್ ಸೈನ್ಯಗಳನ್ನು ಜಮಾವಣೆ ಮಾಡಲಾಗಿತ್ತು. ಬ್ರಿಟಿಷ್ ಸೇನಾ ನೆಲೆಗಳು ಅಕ್ಕಪಕ್ಕದ ಗ್ರಾಮಗಳನ್ನು ಅಧೀನಕ್ಕೆ ತೆಗೆದುಕೊಂಡು ಅನೇಕ ಕಾಲೋನಿಗಳ ಮಾದರಿಯಲ್ಲಿ ಆಯೋಜಿಸಿ ಬ್ರಿಟಿಷ್ ಹಾಗೂ ಐರೋಪ್ಯ ನಾಗರಿಕರಿಗೆ ಇಲ್ಲಿಯೇ ಮನೆಗಳನ್ನು ನಿರ್ಮಿಸಿಕೊಟ್ಟಿತು.

ಭಾರತದಲ್ಲಿ ಬ್ರಿಟಿಷರ ೪೦ ಕಂಟೋನ್ಮೆಂಟ್‌ಗಳು ಇದ್ದವು. ದಂಡು ಪ್ರದೇಶವು ಮೂಲದಲ್ಲಿ ಬ್ರಿಟಿಷರ ಸೈನ್ಯ ಹಾಗೂ ಅದರ ಹಿತಾಸಕ್ತಿ ಕಾಯ್ದು ಕೊಳ್ಳುವ ಸೀಮಿತ ಉದ್ದೇಶವನ್ನಷ್ಟೇ ಹೊಂದಿತ್ತು. ಆದರೆ, ಬ್ರಿಟೀಷರ ಸಾಮ್ರಾಜ್ಯಶಾಹಿ ಧೋರಣೆಯ ಕಾರಣದಿಂದಾಗಿ, ಈಪ್ರದೇಶವು ಒಂದು ರೀತಿ ಐರೋಪ್ಯ ಸಂಸ್ಕೃತಿಯ ಕೇಂದ್ರ ಸ್ಥಾನವಾದಂತಾಯಿತು. ಬ್ರಿಟಿಷರು ಆರ್ಥಿಕವಾಗಿ ಪ್ರಬಲರಾದಂತೆ ಬೆಂಗಳೂರು ಒಳಗೊಂಡಂತೆ ಇತರೆ ಕಂಟೋನ್ಮೆಂಟ್‌ಗಳನ್ನು ಐರೋಪ್ಯ ಮಾದರಿಯ ನಗರಗಳನ್ನಾಗಿ ಮಾಡಲೆತ್ನಿಸಿದರು.



ಭಾರತೀಯರಿಗೆ ವಿಪರೀತ ನಿಬಂಧನೆಗಳನ್ನು ಹಾಕಲೆತ್ನಿಸಿದರು ಉದಾ– ದಂಡು ಪ್ರದೇಶದಲ್ಲಿ ಓಡಾಡುವ ಬಂಡಿಯ ಎತ್ತಿಗಾಗಲಿ, ಕುದುರೆಗಾಗಲಿ ಗಂಟೆ, ಗೆಜ್ಜೆ ಕಟ್ಟಿ ಸದ್ದು ಮಾಡಿದರೆ ೫ ರೂಪಾಯಿ ದಂಡ ವಿಧಿಸುತ್ತಿದ್ದರು. ಕಬ್ಬನ್ ಪಾರ್ಕ್ ನಿರ್ಮಾಣದ ಒಳ–ಉದ್ದೇಶ ಕೂಡ ಕಂಟೋನ್ಮೆಂಟ್ ಬ್ರಿಟಿಷ್ ನಿವಾಸಿಗಳು ಮತ್ತು ಹಳೇ ಬೆಂಗಳೂರಿನ ಸ್ಥಳೀಯರನ್ನು ದೂರವಿರಿಸುವುದಾಗಿತ್ತು. ಬಿಳಿ ಚರ್ಮದ ತಾವು ಮೇಲ್ವರ್ಗದವರು, ಸ್ಥಳೀಯ 'ನೇಟಿವ್'ಗಳು ಕೆಳವರ್ಗದವರು ಅಥವಾ ಕೀಳುಜನ ಎಂಬ ತಾರತಮ್ಯ ಭಾವನೆ, ಸ್ಥಳೀಯರನ್ನು ತುಚ್ಚೀಕರಿಸುವ ಪ್ರವೃತ್ತಿ ಅವರಲ್ಲಿದ್ದುದೇ ಇದಕ್ಕೆ ಪ್ರಮುಖ ಕಾರಣ.

೧೮೦೯ರಲ್ಲಿ ಮಿಲಿಟರಿ ಕಂಟೋನ್ಮೆಂಟ್ ಬೆಂಗಳೂರಿನಲ್ಲಿ ಸ್ಥಾಪಿತವಾದರೂ, ಅಲ್ಲಿಯ ಮಿಲಿಟರಿ ಮತ್ತು ಜನವಾಸದ ಭೂಮಿ ಮಾತ್ರ ಮೈಸೂರು ರಾಜ್ಯದ ಸ್ವಾಧೀನತೆಯಲ್ಲೇ ಇತ್ತು. ೧೮೦೯ರಿಂದ ೧೮೮೧ರವರೆಗೆ ಇದು ಕಂಟೋನ್ಮೆಂಟ್ ಎಂದೂ, ಅನಂತರ 'ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಮುನಿಸಿಪಾಲ್ಟಿ' ಅಂತಲೂ ಕರೆಯಲ್ಪಟ್ಟಿತು. ಬೆಂಗಳೂರಿನಲ್ಲಿ ಎರಡು ಪುರಸಭೆಗಳಿದ್ದವು– ಒಂದು 'ನಗರ ಸಭೆ' ಮತ್ತೊಂದು 'ದಂಡು ಮತ್ತು ನಾಗರಿಕ ಪುರಸಭೆ'; ೧೯೪೯ರಲ್ಲಿ ಎರಡೂ ವಿಲೀನವಾಗಿ 'ಬೆಂಗಳೂರು ನಗರ ಮುನಿಸಿಪಲ್ ಕಾರ್ಪೊರೇಶನ್' ಆಯಿತು.

೧೮೩೧ ರಿಂದ ೧೮೮೧ ರವರೆಗೆ ೫೦ ವರ್ಷಗಳು ಇಂಗ್ಲಿಷ್ ಕಮೀಷನರ ನೇರ ಆಳ್ವಿಕೆಯಿತ್ತು. ೧೮೮೧ ಬೆಂಗಳೂರಿಗೆ ಒಂದು ಮಹತ್ವದ ವರ್ಷ ಆಗ ಬ್ರಿಟಿಷ್ ಕಮೀಷನರ್ ಆಡಳಿತ ಕೊನೆಯಾಗಿ ರಾಜ್ಯದ ಆಡಳಿತ ಮೈಸೂರು ಮಹಾರಾಜರ ವಶಕ್ಕೆ ಬಂದಿತು. ಅದರ ಜೊತೆಗೆ ಸರ್ಕಾರಿ ಆಡಳಿತ ಕೇಂದ್ರ ಮೈಸೂರಿನಿಂದ ಬೆಂಗಳೂರಿಗೆ ವರ್ಗವಾಯಿತು. ಹೀಗಾಗಿ ದಿವಾನರ ಕಛೇರಿಯೂ ಬೆಂಗಳೂರಿಗೆ ಬಂತು.

ಇಷ್ಟೊಂದು ಬಿಗಿಯಾದ ಸೈನಿಕ ನೆಲೆಯ ವಾತಾವಾರಣದಲ್ಲೂ ಸ್ವಾತಂತ್ರ್ಯ ಹೋರಾಟದ ಪ್ರಯತ್ನಗಳು ನಡೆದದ್ದು ಭಾರತೀಯರಿಗಿದ್ದ ಸ್ವಾತಂತ್ರ್ಯ ದಾಹದ ತೀವ್ರತೆಯನ್ನು ತಿಳಿಸುತ್ತದೆ.

❑

## ೭. ಶಿಕ್ಷಣ–ಸಂಸ್ಥೆಗಳು–ಪತ್ರಿಕೆಗಳು : ಜನಜಾಗೃತಿಯ ತಳಪಾಯ

ದೀರ್ಘಕಾಲದ ದಾಸ್ಯದಲ್ಲಿ ಮುಳುಗಿರುವ ಸಮಾಜವನ್ನು ಬಡಿದೆಬ್ಬಿಸುವುದು ಒಂದು ಮಹತ್ತ್ವದ ಕೆಲಸ ಹಾಗೂ ಅದು ಮೊದಲ ಆದ್ಯತೆಯೂ ಹೌದು. ಎಲ್ಲಿಯ ತನಕ ಜನಸಾಮಾನ್ಯರಿಗೆ ಈ ಪರಕೀಯರಿಂದ ಮುಕ್ತಿ ಬೇಕೆನಿಸುವುದಿಲ್ಲವೊ, ಅಲ್ಲಿಯ ತನಕ ಹೋರಾಟ ತೀರಾ ಸೀಮಿತವಾಗಿಯೇ ಉಳಿಯುತ್ತದೆ. ಆ ನಿಟ್ಟಿನಲ್ಲಿ ಕೆಲಸ ಮಾಡಿದ್ದು ಬೆಂಗಳೂರಿನ ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸಂಸ್ಥೆಗಳೂ ಹಾಗೂ ಪತ್ರಿಕೆಗಳು.

ಬೆಂಗಳೂರಿನಲ್ಲಿ ಶಾಲಾ–ಕಾಲೇಜುಗಳು ಆರಂಭವಾದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸಾಮಾನ್ಯ ಜನರೂ ಉತ್ಸಾಹದಿಂದ ಸೇರಲಾರಂಭಿಸಿದರು. ಆಧುನಿಕ ಶಿಕ್ಷಣ ಪಡೆಯುವವರು ಹೆಚ್ಚಾದಂತೆ ಜನಸಾಮಾನ್ಯರಲ್ಲಿ ಜಾಗೃತಿ ಪ್ರಾರಂಭವಾಯಿತು. ಪತ್ರಿಕೆಗಳು ದೇಶದ ಆಗುಹೋಗುಗಳನ್ನು ಪ್ರಸಾರ ಮಾಡಲು ತೊಡಗಿದಂತೆ, ಸಹಜವಾಗಿ ಬ್ರಿಟಿಷರ ಅನ್ಯಾಯ–ದುರಾಡಳಿತದ ವಿರುದ್ಧ ಜನ ಧ್ವನಿಯೆತ್ತಲು ಆರಂಭಿಸಿದರು. ರಾಷ್ಟ್ರೀಯ ಮಟ್ಟದ ಮತ್ತು ಕೆಲವು ಸ್ಥಾನೀಯ ಸಾಮಾಜಿಕ ಸಂಸ್ಥೆಗಳು ಜನರಿಗೆ ವೈಚಾರಿಕವಾಗಿ ಸ್ಫೂರ್ತಿ ನೀಡಿದವು. ೧೯ನೇ ಶತಮಾನದ ಉತ್ತರಾರ್ಧದಲ್ಲಿ ಶಿಕ್ಷಣದಿಂದ ವಿದ್ಯಾವಂತರ ಸಂಖ್ಯೆಯಲ್ಲಿ ಹೆಚ್ಚಳ, ಹೊರಪ್ರಪಂಚದ ಸಂಪರ್ಕವನ್ನು ಹೆಚ್ಚಿಸಿದ ಪತ್ರಿಕೆಗಳು ಮತ್ತು ಸಾಮಾಜಿಕ ಸಂಸ್ಥೆಗಳು, ಒಟ್ಟಾರೆ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಬಲವಾದ ತಳಹದಿಯನ್ನು ಹಾಕಿಕೊಟ್ಟವು.

ಬೆಂಗಳೂರಲ್ಲಿ ಶುರುವಾದ ಸೆಂಟ್ರಲ್ ಕಾಲೇಜ್(೧೮೭೫), ಸೆಂಟ್ ಜೋಸೆಫ್ ಕಾಲೇಜ್ (೧೮೮೨) ಇತ್ಯಾದಿ ಶಾಲಾ–ಕಾಲೇಜುಗಳು ವಿದ್ಯಾವಂತರ ಸಂಖ್ಯೆಯನ್ನು ಸಾಕಷ್ಟು ಹೆಚ್ಚಿಸಿದವು.

ಅಖಿಲಭಾರತ ಮಟ್ಟದ ಹಲವು ಸಂಸ್ಥೆಗಳು ಬೆಂಗಳೂರಿಗೆ ಬಂದವು. ೧೮೭೦ರ ದಶಕದಲ್ಲಿ 'ಬ್ರಹ್ಮ ಸಮಾಜ', ೧೮೯೪ರಲ್ಲಿ 'ಆರ್ಯಸಮಾಜ', ೧೮೮೪ರಲ್ಲಿ 'ಥಿಯಾಸಫಿಕಲ್ ಸೊಸೈಟಿ', ಇವರಿಂದ ಪ್ರೇರಿತರಾಗಿ ಅನೇಕರು ಖಾಸಗಿ ಶಿಕ್ಷಣ ಸಂಸ್ಥೆಗಳನ್ನೂ ತೆರೆದರು, ಅವುಗಳಲ್ಲಿ ಹಲಸೂರಿನ ಆರ್.ಬಿ.ಎ.ಎನ್.ಎಂ. ಶಾಲೆ ತುಂಬಾ ಪ್ರಮುಖವಾದದ್ದು.

ಸ್ವಾಮಿ ವಿವೇಕಾನಂದರು ೧೮೯೨ರಲ್ಲಿ ಬೆಂಗಳೂರಿಗೆ ಬಂದದ್ದು ಹಲಸೂರಿನಲ್ಲಿ ಉಳಿದಿದ್ದು ತಿಳಿದೇ ಇದೆ, ಡಾ.ಪಲ್ಪು ಅವರೊಂದಿಗೆ ಆದ ಐತಿಹಾಸಿಕ ಭೇಟಿ ಮುಂದೆ ಕೇರಳದಲ್ಲಿ ದೊಡ್ಡ ಪರಿವರ್ತನೆಗೇ ನಾಂದಿಯಾಯಿತು. ೧೯೦೪ರಲ್ಲಿ ರಾಮಕೃಷ್ಣ ಮಠ ಬೆಂಗಳೂರಿಗೆ ಬಂತು, ಕಂಟೋನ್ಮೆಂಟ್ ಹಾಗೂ ಬಸವನಗುಡಿಗಳಲ್ಲಿ ಅದರ ಶಾಖೆಗಳು ಸ್ಥಾಪನೆಯಾದವು.

ಬ್ರಿಟಿಷ್ ಸರ್ಕಾರದ ಪಾಶ್ಚಾತ್ಯೀಕರಣದ ನಿಲುವು, ಕ್ರೈಸ್ತ ಮಿಷನರಿಗಳಿತ್ತ ಪ್ರೋತ್ಸಾಹ, ಮಿಷನರಿಗಳು ಶಿಕ್ಷಣದಲ್ಲಿ ಹೊಂದಿದ ಪ್ರಭಾವಗಳ ಬಗ್ಗೆ ನೊಂದ ಸಮಾಜಕ್ಕೆ ಅನೇಕ ಸಮಾಜ ಸುಧಾರಕರು ಉತ್ತರ ಹುಡುಕಲು ಪ್ರಾರಂಭಿಸಿದರು. ಇದಾದ ನಂತರ ಅನೇಕ ಸಂಘ ಸಂಸ್ಥೆಗಳು ಹುಟ್ಟಿಕೊಂಡವು ಉದಾ:– 'ಇಂಡಿಯನ್ ಪ್ರೊಗ್ರೆಸಿವ್ ಯುನಿಯನ್', 'ಮಿಥಿಕ್ ಸೊಸೈಟಿ', 'ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ', 'ಶಾರದಾ ಸ್ತ್ರೀ ಸಮಾಜ', ಇತ್ಯಾದಿ. ಇವೆಲ್ಲ ಪರೋಕ್ಷವಾಗಿ ಸ್ವಭಾಷೆ, ಸ್ವದೇಶಗಳ ಬಗ್ಗೆ ಅಭಿಮಾನ ಮೂಡಿಸಿ ರಾಷ್ಟ್ರೀಯ ಜಾಗೃತಿಗೆ ಕಾರಣವಾದವು. ಇದೇ ಹಿನ್ನಲೆಯಲ್ಲಿ ಪ್ರಾರಂಭವಾದ 'ಅಮೆಚ್ಯುರ್ ಡ್ರಮಾಟಿಕ್ ಅಸೋಸಿಯೇಷನ್' ತನ್ನ ವಾರ್ಷಿಕೋತ್ಸವಕ್ಕೆ ರವೀಂದ್ರನಾಥ ಠಾಗೂರ್(೧೯೧೯) ಮತ್ತು ಸರೋಜಿನಿ ನಾಯ್ಡು (೧೯೨೦) ಅವರನ್ನೂ ಆಮಂತ್ರಿಸಿತ್ತು.

ಬೆಂಗಳೂರಲ್ಲಿ ಸಂಸ್ಕೃತಿ–ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡುವ ಅನೇಕ ಸಂಸ್ಥೆಗಳು ಹುಟ್ಟಿಕೊಂಡವು, ಇಲ್ಲಿಯ ವಿದ್ಯಾವಂತರ–ಗಣ್ಯರ ಮನಸ್ಸನ್ನು

ಸಂಸ್ಕೃತಿ, ಸಾಹಿತ್ಯದೆಡೆಗೆ ಆಕರ್ಷಿಸಿ ಅದರಿಂದ ಸಾಮಾಜಿಕತೆ ಮತ್ತು ರಾಷ್ಟ್ರೀಯತೆಯ ಕಡೆಗೆ ತಿರುಗಿಸಲು ಕಾರಣವಾದವು. ಉದಾಹರಣೆಗೆ 'ಬೆಂಗಳೂರು ಲಿಟರರಿ ಯೂನಿಯನ್', 'ರಾನಡೆ ಸೊಸೈಟಿ', 'ಮಹಿಳಾ ಸೇವಾ ಸಮಾಜ', 'ಕನ್ನಡ ಸಾಹಿತ್ಯ ಪರಿಷತ್', ಇತ್ಯಾದಿ. ಇವುಗಳ ಕಾರ್ಯಕ್ರಮಗಳ ಮೂಲಕ ರಾಷ್ಟ್ರೀಯ ಗೌರವ ಮತ್ತು ರಾಷ್ಟ್ರೀಯತೆಯ ಭಾವನೆ ಸ್ಫುರಣೆ, ಇವೆಲ್ಲವೂ ಪರಿಣಾಮಕಾರಿಯಾಗಿ ಜನರ ಹೃದಯದಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸುವುದರಲ್ಲಿ ಯಶಸ್ವಿಯಾದವು. ವಿದ್ಯಾವಂತರನ್ನು ಕಲೆಹಾಕಿ ವಿಚಾರ ವಿನಿಮಯ ಹಾಗೂ ಚರ್ಚೆಗೆ ಅವಕಾಶ ಮಾಡಿಕೊಟ್ಟು ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿಸುವುದರಲ್ಲಿ ಸಹಾಯಕವಾದವು.

ಕನ್ನಡದಲ್ಲಿ ಮೊದಲ ಪತ್ರಿಕೆ ೧೮೪೩ರಲ್ಲಿ ಒಬ್ಬ ಜರ್ಮನ್ ಪಾದ್ರಿ ಪ್ರಾರಂಭಿಸಿದರು. 'ಮಂಗಳೂರು ಸಮಾಚಾರ' ಎಂಬ ಈ ಪಾಕ್ಷಿಕ ಪತ್ರಿಕೆ ಸುದ್ದಿ ಪ್ರಸಾರಕ್ಕಿಂತಲೂ ಹೆಚ್ಚಾಗಿ ಕ್ರೈಸ್ತ ಮತಪ್ರಚಾರಕ್ಕಾಗಿ ಇತ್ತು. ೧೮೬೫ರಲ್ಲಿ 'ಕರ್ನಾಟಕ ಪ್ರಕಾಶಿಕೆ' ಎಂಬ ನಮ್ಮ ಪತ್ರಿಕೆ ಪ್ರಾರಂಭವಾಯಿತು. ಸಮಾಜ ಸುಧಾರಣೆ, ವಿಧವಾ ವಿವಾಹ, ಶಿಕ್ಷಣ ಇತರ ಸಾಮಾಜಿಕ ಸಂಗತಿಗಳನ್ನು, ಪ್ರಗತಿಪರ ಧೋರಣೆ, ಕಾಂಗ್ರೆಸ್ ಚಟುವಟಿಕೆಗಳಿಗೆ ಬೆಂಬಲ ನೀಡುವ ವಿಷಯಗಳನ್ನು ಮುಖ್ಯವಾಗಿಟ್ಟುಕೊಂಡು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪತ್ರಿಕೆ ಪ್ರಕಟವಾಯಿತು.

ಕರ್ನಾಟಕ ಪ್ರಕಾಶಿಕೆಯಯು ಬ್ರಿಟಿಷ್ ಆಳ್ವಿಕೆಯ ಕುರಿತು ತೀಕ್ಷ್ಣ ಟೀಕೆಗಳನ್ನು ಮಾಡುತ್ತಿತ್ತು. 'ಮುಸ್ಲಿಮರ ಪ್ರಭುತ್ವದಲ್ಲಿ ಹಿಂದೂಗಳು ರಾಜಕೀಯ ಸ್ಥಾನಮಾನಗಳನ್ನು ಕಳೆದುಕೊಂಡರೆ, ಬ್ರಿಟಿಷ್ ಪ್ರಭುತ್ವದಲ್ಲಿ ಭಾರತೀಯರು ತಮ್ಮ ಸರ್ವಸ್ವವನ್ನು ಕಳೆದುಕೊಂಡರು' ಎಂದು ಒಮ್ಮೆ ಬರೆದು ಸಮಾಜದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

೧೮೫೯ ರಿಂದ ೧೮೯೬ರವರೆಗಿನ ೩೬ ವರ್ಷಗಳಲ್ಲಿ ಕನ್ನಡ, ಉರ್ದು, ಇಂಗ್ಲೀಷ್ ಭಾಷೆಗಳಲ್ಲಿ ೧೧ ಪತ್ರಿಕೆಗಳು. ಪ್ರಕಾಶನ ಶುರು ಮಾಡಿದವು. ಇವು ರಾಜ್ಯದ ವಿವಿಧ ಸ್ಥಳಗಳ ಸುದ್ದಿಯನ್ನೇ ಅಲ್ಲದೆ ಇಂಗ್ಲೀಷರ ಆಳ್ವಿಕೆಯಲ್ಲಿನ ತಪ್ಪುಗಳು, ದಬ್ಬಾಳಿಕೆಯ ಪ್ರಸಂಗಗಳನ್ನು ಎತ್ತಿತೋರಿಸಿ, ಅನ್ಯಾಯಗಳನ್ನು



ಚಿತ್ರಿಸಿ ಜನತೆ ಎಚ್ಚೆತ್ತುಕೊಳ್ಳುವಂತೆ ಮಾಡಿದವು. ಬೆಂಗಳೂರಿನ ಪತ್ರಿಕೆಗಳು ಜನಜಾಗೃತಿಯಲ್ಲಿ ಮಹತ್ತ್ವದ ಪಾತ್ರ ವಹಿಸಿದವು. ಸ್ವಾತಂತ್ರ್ಯ, ಸಾಮಾಜಿಕ ಸುಧಾರಣೆಯ ಧ್ವನಿ ಅವುಗಳಲ್ಲಿ ಸ್ಪಷ್ಟವಾಗಿದ್ದವು. ೧೯೦೦ರಲ್ಲಿ ಬೆಂಗಳೂರಿನಲ್ಲೇ ೨೦ ಮುದ್ರಣಾಲಯಗಳು ಇದ್ದವು ಎಂಬುದು ಪತ್ರಿಕೆ ಹಾಗೂ ಸಾಹಿತ್ಯದ ಬೆಳವಣಿಗೆಯ ಒಂದು ಸ್ಪಷ್ಟ ಸೂಚನೆ.

ಇದರ ಜೊತೆ ರಾಷ್ಟ್ರೀಯ ಮಟ್ಟದ ಪತ್ರಿಕೆಗಳಾದ 'ದಿ ಹಿಂದೂ', ಅನಿಬೆಸೆಂಟರ 'ನ್ಯೂ ಇಂಡಿಯಾ' ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಆಂದೋಲನಗಳ ಬಗ್ಗೆ ವರದಿ, ಸಮೀಕ್ಷೆ, ಚರ್ಚೆ, ಸಂಪಾದಕೀಯಗಳಿಂದ ಜನಜಾಗೃತಿಯನ್ನು ಉಂಟುಮಾಡಿದವು. ತಿಲಕರ 'ಕೇಸರಿ', 'ಮರಾಠ'ಗಳ ಜೊತೆ ಅರವಿಂದ ಮುಂತಾದ ಕೆಲವು ಕ್ರಾಂತಿಕಾರಿ ಪತ್ರಿಕೆಗಳು ಸಂಸ್ಥಾನದಲ್ಲಿ ನುಸುಳಿ ಬರುತ್ತಿದ್ದವು. ಸುಬ್ರಹ್ಮಣ್ಯ ಭಾರತಿ, ವಿ.ವಿ.ಎಸ್.ಅಯ್ಯರ್, ಮುಂತಾದವರ ಪ್ರಭಾವವು ಆಗುತ್ತಿತ್ತು. ಹಲವು ಪತ್ರಿಕೆಗಳು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಚಳುವಳಿಗಳನ್ನು ಬೆಂಬಲಿಸಿದವು. ಸ್ವದೇಶಿ ಪ್ರಚಾರವು ಭರದಿಂದ ಸಾಗಿ ಅನೇಕ ಕಾರ್ಯಕರ್ತರು ಸಂಸ್ಥಾನದಲ್ಲಿ ಇದಕ್ಕಾಗಿ ದುಡಿಯುತ್ತಿದ್ದರು. ವಿದೇಶಿ ಸಕ್ಕರೆಯ ವಿರುದ್ಧವಂತೂ ಯಶಸ್ವಿಯಾದ ಪ್ರಚಾರದ ಪ್ರಸಂಗವು ನಡೆದಿತ್ತು.

ಈ ರೀತಿಯಾಗಿ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬೆಂಗಳೂರಿನಲ್ಲಿ ಹುಟ್ಟಿಕೊಂಡ ಪತ್ರಿಕೆಗಳು ಧರ್ಮ ಪ್ರಚಾರದಿಂದ ಶುರುಮಾಡಿ, ಕ್ರಮೇಣ ಸಾಹಿತ್ಯ, ಜನಜೀವನ, ಸಮಾಜ ಉದ್ಧಾರ, ಪ್ರಗತಿಪರ ವಿಚಾರಗಳನ್ನು ಹರಿಸಿ ಜನರ ದೃಷ್ಟಿಯನ್ನು ಸರ್ಕಾರದ ಧೋರಣೆಯಿಂದಾಗಿ ಹೊಸ ಜಾಡನ್ನೇ ಹಿಡಿದು ಸಮಾಜ ಕಲ್ಯಾಣ ಮತ್ತು ದೇಶದ ಸ್ವಾತಂತ್ರ್ಯವನ್ನು ಗುರಿಯಾಗಿಟ್ಟುಕೊಂಡು, ಜನರಲ್ಲಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿ ಬ್ರಿಟಿಷರ ವಿರುದ್ಧ ಸೆಣಸಾಡುವುದು ತಮ್ಮ ಕರ್ತವ್ಯವೆಂದು ಪತ್ರಿಕೆಗಳು ಸಾರಿದವು.

ಭಾರತದಲ್ಲಿನ ರಾಜರ ಆಳ್ವಿಕೆಯ ಪ್ರಾಂತ್ಯದಲ್ಲಿ ಜನರಿಗೆ ಪ್ರಾತಿನಿಧ್ಯತೆ ಬೇಕು, ಇಲ್ಲಿಯ ಶ್ರಮಜೀವಿಗಳು, ಕಸಬುದಾರರ, ನೇಕಾರರ ಹೀನಾಯ ಸ್ಥಿತಿಯನ್ನು ಉತ್ತಮಗೊಳಿಸಬೇಕು ಎಂದು 'ಕರ್ನಾಟಕ ಪ್ರಕಾಶಿಕೆ' ಮತ್ತು ಕೆಲ ಪತ್ರಿಕೆಗಳು ಬರೆದವು.೧೯೦೬ರ ಸ್ವದೇಶಿ ಚಳುವಳಿಯ ಬಗ್ಗೆ ಬರೆಯುವಾಗ

ಅನೇಕ ಪತ್ರಿಕೆಗಳು ಬ್ರಿಟಿಷರನ್ನು ತೀವ್ರವಾಗಿ ಖಂಡಿಸಿ ಬರೆದವು. ಪತ್ರಿಕೆಗಳ ಧೋರಣೆಯನ್ನು ಸಹಿಸದ ಸರ್ಕಾರ ೧೯೦೮ರಲ್ಲಿ 'ಸುದ್ದಿ ಪತ್ರಿಕೆಗಳ ನಿಯಂತ್ರಣ ಕಾಯಿದೆ' ಜಾರಿಗೆ ತಂದಿತು. ಇದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಲು 'ಮೈಸೂರು ಹೆರಾಲ್ಡ್', 'ವೃತ್ತಾಂತ ಚಿಂತಾಮಣಿ'. 'ನಡೆಗನ್ನಡಿ' ಮತ್ತು 'ಭಾರತಿ' ಎಂಬ ಪತ್ರಿಕೆಗಳು ತಮ್ಮ ಪ್ರಕಟಣೆಯನ್ನೇ ನಿಲ್ಲಿಸಿದವು.

ಪತ್ರಿಕೋದ್ಯಮ ಕ್ಷೇತ್ರಕ್ಕೆ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಡಿವಿಜಿಯವರ ಕೊಡುಗೆ ಅಮೋಘ. ಡಿವಿಜಿಯವರು ಪತ್ರಿಕೆಯಲ್ಲಿ ಸೇರಿ ಕೆಲಸಮಾಡಿದರು, ಬೇರೆ ಪತ್ರಿಕೆಗಳಿಗೆ ಅಂಕಣಗಳನ್ನು ಬರೆದರು, ತಾವೇ ಪತ್ರಿಕೆಗಳನ್ನು ಆರಂಭಮಾಡಿ ನಡೆಸಿದರು. ಪತ್ರಿಕಾ ವೃತ್ತಿಯನ್ನೇ ಬೆಳೆಸಿ, ನಿಶ್ಚಿತ ಧೋರಣೆಗಳನ್ನು ಕೊಟ್ಟು ಆ ವೃತ್ತಿಯ ಮೌಲ್ಯವನ್ನು ಹೆಚ್ಚಿಸಲು ಆಗ್ರಹಿಸಿದರು.



**(ಕನ್ನಡ ಸಾಹಿತ್ಯ ಪರಿಷತ್ತು)**

ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ನಿಲುವು, ಹೊಸ ತಿರುವು, ಆಯಾಮಗಳನ್ನು ಡಿವಿಜಿ ಕೊಟ್ಟರು. ಕಂಟೋನ್ಮೆಂಟಿನ ಕಾಕ್ಸ್‌ಟೌನ್‌ನಿಂದ ಹೊರಡುತ್ತಿದ್ದ 'ಈವಿನಿಂಗ್ ಮೇಲ್' ಎಂಬ ಇಂಗ್ಲಿಷ್ ಪತ್ರಿಕೆಗೂ , 'ನಡೆಗನ್ನಡಿ' ವಾರಪತ್ರಿಕೆ ಮತ್ತು 'ಮೈಸೂರು ಸ್ಟ್ಯಾಂಡರ್ಡ್' ಎಂಬ ಇಂಗ್ಲೀಷ್ ಪತ್ರಿಕೆಗೂ ಡಿವಿಜಿ ಲೇಖನಗಳನ್ನು ಬರೆಯುತ್ತಿದ್ದರು. ಆಗಿನ ಕಾಲದಲ್ಲೇ ಪತ್ರಿಕಾ ಸಂಸ್ಕೃತಿಯ



ಕುರಿತಾಗಿ "ವೃತ್ತಪತ್ರಿಕೆಗಳೂ" ಎಂಬ ಪುಸ್ತಕವನ್ನು ಬರೆದರು. ಅದರಲ್ಲಿರುವ ಹಲವು ಅಂಶಗಳು ಇಂದಿಗೂ ಪತ್ರಿಕಾ ಪ್ರಪಂಚಕ್ಕೆ ದಿಗ್ದರ್ಶನವಾಗಿವೆ.

ಕಾಂಗ್ರೆಸ್ ಚಟುವಟಿಕೆಗಳು ಚುರುಕಾದ ಮೇಲೆ, ರಾಷ್ಟ್ರೀಯ ಭಾವನೆಯನ್ನು ಮೂಡಿಸುವುದರಲ್ಲಿ ಅನೇಕ ಪತ್ರಕರ್ತರ ಪಾತ್ರ ಮುಖ್ಯವಾಗಿತ್ತು ೧೯೨೪ ರಿಂದ ೨೮ರ ನಾಲ್ಕು ವರ್ಷಗಳಲ್ಲಿ ಹಲವು ಪತ್ರಿಕೆಗಳು ಬಂದವು– ತಿ.ತಾ.ಶರ್ಮರ 'ವಿಶ್ವಕರ್ನಾಟಕ', ರಾಮರಾವ್‌ಅವರ 'ಶುಭೋದಯ', ಸೀತಾರಾಮಶಾಸ್ತ್ರಿ ವೀರಣ್ಣಗೌಡರ 'ಚಿತ್ರಗುಪ್ತ', ಪಿ.ಆರ್.ರಾಮಯ್ಯನವರ 'ತಾಯಿನಾಡು'. ಈ ಪತ್ರಕರ್ತರು ಸ್ವಾತಂತ್ರ ಚಳುವಳಿಯ ಹೆಜ್ಜೆಯನ್ನು ವಿಶ್ಲೇಷಿಸಿ ಸರಿ–ತಪ್ಪುಗಳನ್ನು ಎತ್ತಿಹಿಡಿದು ಮುಂದಿನ ಕಾರ್ಯಕ್ಕೆ ದಾರಿದೀಪವಾಗಿ ಕೆಲಸ ಮಾಡಿದರು. ಹೀಗೆ ಹೊರಪ್ರಪಂಚದ ವಿದ್ಯೆ ಮತ್ತು ಹೊರಪ್ರಪಂಚದ ತಿಳಿವು ಯುವಕರಲ್ಲಿ ರಾಷ್ಟ್ರೀಯ ಭಾವನೆಯನ್ನು ಹರಡಿ ನಾಲ್ಕಾರು ಕಡೆ ಸ್ವಾತಂತ್ರ್ಯದ ಕಿಡಿ ಹಾರುವ ಪರಿಸ್ಥಿತಿಯನ್ನು ಕಲ್ಪಿಸಿಕೊಟ್ಟವು.



**(ತಿ.ತಾ.ಶರ್ಮ)**

ಯಾವುದೇ ಸಾಮಾಜಿಕ, ರಾಜಕೀಯ ಬದಲಾವಣೆ ತರಬೇಕಾದಲ್ಲಿ ಜನಜಾಗೃತಿಯೆಂಬುದು ಮೊದಲ ಹೆಜ್ಜೆಯೆಂಬುದನ್ನು ಬೆಂಗಳೂರಿನ ಸ್ವಾತಂತ್ರ್ಯದ ಇತಿಹಾಸ ಮತ್ತೊಮ್ಮೆ ದೃಢೀಕರಿಸಿದೆ.

❑

## ೮. ಬ್ರಿಟಿಷರ ವಿರುದ್ಧ ಹೋರಾಟ : ಪ್ರಮುಖ ಘಟ್ಟಗಳು

೧೯೦೬ರ ಸ್ವದೇಶಿ ಚಳುವಳಿಯಿಂದ ೧೯೪೨ರ ಚಲೇ ಜಾವ್ ಚಳುವಳಿವರೆಗೂ ಬೆಂಗಳೂರಿನ ಪ್ರಜೆಗಳು ಎಲ್ಲ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಕರ ನಿರಾಕರಣೆಯ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದ ಚಳುವಳಿ ಇವುಗಳಲ್ಲಿ ಈ ಭಾಗದ ಜನರು ಕೈಗೊಂಡ ಸಾಹಸ ಅದ್ವಿತೀಯವಾದದ್ದು. ಈ ಎಲ್ಲಾ ಚಳುವಳಿಗಳಲ್ಲಿ ಇಲ್ಲಿಯ ಮುಖಂಡರು, ಸ್ವಯಂಸೇವಕರು ವ್ಯಕ್ತಪಡಿಸಿದ ನಿರ್ಭಯತೆ, ತ್ಯಾಗ, ಸಹನೆ ಅತ್ಯಂತ ಸ್ಫೂರ್ತಿದಾಯಕವಾದದ್ದು. ಇವುಗಳಲ್ಲಿ ಪ್ರಮುಖ ಘಟ್ಟಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

- **'ಪ್ರಜಾಪ್ರತಿನಿಧಿ ಸಭೆ'** : ಸರ್ಕಾರಕ್ಕೂ ಪ್ರಜೆಗಳಿಗೂ ಇರುವ ಅಂತರವನ್ನು ಕಡಿಮೆ ಮಾಡಬೇಕು. ಹೀಗಾಗುವುದರಿಂದ ಪ್ರಜೆಗಳಿಗೂ ರಾಜ್ಯಕ್ಕೂ ಲಾಭವೇ ಸರಿ ಎಂದು ಯೋಚಿಸಿದ ದಿವಾನ್ ರಂಗಾಚಾರ್ಯಲು ಅವರು, ವರ್ಷಕ್ಕೊಮ್ಮೆ ದಸರಾ ಉತ್ಸವದಲ್ಲಿ 'ಪ್ರಜಾಪ್ರತಿನಿಧಿ ಸಭೆ' ಸೇರಬೇಕೆಂದು ಪ್ರಾರಂಭ ಮಾಡಿದರು. ವಿಶ್ವೇಶ್ವರಯ್ಯನವರು ಈ ಸಭೆ ವರ್ಷಕ್ಕೆರಡು ಸಲ ಸೇರುವಂತೆ ಮಾಡಿದರು. ಈ ಸಭೆಯಲ್ಲಿ ತಾವು ಸರ್ಕಾರದ ಚಲನೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತೇವೆ ಎಂಬ ಅನಿಸಿಕೆ ಪ್ರಜಾ ಪ್ರಮುಖರಲ್ಲಿ ಮೂಡಲು ಪ್ರಾರಂಭಿಸಿತು. ಪ್ರಾಯಶ: ಬ್ರಿಟಿಷರ ವಿರುದ್ಧದ ಸ್ವಾತಂತ್ರ ಹೋರಾಟದಲ್ಲಿ ಮೊದಲ ಕಿಡಿ ಹಾರಿದಂತಾಯಿತು.

- **ಜವಾಬ್ದಾರಿ ಸರ್ಕಾರ** : ರಾಜರು ಆಳುತ್ತಿದ್ದ ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಶುರು ಮಾಡಬೇಕೆಂಬ ಅರ್ಜಿಯನ್ನು ಡಿವಿಜಿಯವರು ಬರೆದು ೧೯೧೭ರಲ್ಲಿ ಅದನ್ನು 'ಇಂಡಿಯನ್ ಪ್ರಿನ್ಸಸ್ ಲೀಗ್' ಅಧ್ಯಕ್ಷರಾಗಿದ್ದ ಬಿಕನೇರ್ ಮಹಾರಾಜರಿಗೂ ಸಲ್ಲಿಸಿದ್ದರು. 'ಭಾರತದ ನೇಟಿವ್ ರಾಜ್ಯಗಳ ತೊಂದರೆ' ಎಂಬ ಇಂಗ್ಲಿಷ್ ಪುಸ್ತಕವನ್ನು ಡಿವಿಜಿಯವರು ಪ್ರಕಟಿಸಿದರು. ಜವಾಬ್ದಾರಿ ಸರ್ಕಾರ ಹೇಗಿರಬೇಕು, ಅದು ಬರಲೇಬೇಕು ಎಂಬ ಬಗ್ಗೆ ಡಿವಿಜಿ ಅವರಿಗೆ ತೀವ್ರ ಕಾಳಜಿ ಇತ್ತು. ಇದನ್ನು ಪ್ರತಿಪಾದಿಸಲು ೧೯೧೮ರಲ್ಲಿ ಮುಂಬಯಿಯಲ್ಲಿ ನಡೆದ ಕಾಂಗ್ರೆಸ್ ಸಭೆಗೂ ಹೋಗಿದ್ದರು. ೧೯೧೯ರಲ್ಲಿ ಜವಾಬ್ದಾರಿ ಸರ್ಕಾರದ ಅವಶ್ಯಕತೆಯನ್ನು ಬೇಡಿಕೆಯಾಗಿಡಲು 'ಮೈಸೂರು ಪೀಪಲ್ಸ್ ಕನ್ವೆನ್ಷನ್' ಏರ್ಪಡಿಸಿದರು. ಈ ರೀತಿಯಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಡಿವಿಜಿಯವರ ಮಾರ್ಗದರ್ಶನವನ್ನು ಸರ್ ಎಂ.ವಿಶ್ವೇಶ್ವರಯ್ಯನವರೂ ಮತ್ತು ಮಿರ್ಜಾ ಇಸ್ಮಾಯಿಲ್ ಕೂಡ ಪಡೆಯುತ್ತಿದ್ದರು.



(ಡಿ.ವಿ.ಗುಂಡಪ್ಪನವರು)

- ಆಗಿನ ರಾಷ್ಟ್ರೀಯ ಕಾಂಗ್ರೆಸ್ ತನ್ನ ಗಮನವನ್ನು ಕೇವಲ ಬ್ರಿಟೀಷರ ನೇರಾಡಳಿತ ಪ್ರದೇಶದ ಕಡೆ ಕೇಂದ್ರೀಕರಿಸಿ ದೇಶೀಯ ಸಂಸ್ಥಾನಗಳ ಕಡೆ ಅಷ್ಟಾಗಿ ಗಮನ ಇರಲಿಲ್ಲ. ಅವರು ನಮ್ಮದೇ ರಾಜರಲ್ಲವೇ ಅವರ ವಿರುದ್ಧದ ಹೋರಾಟ ಅವಶ್ಯವಿಲ್ಲವೆಂಬ ಧೋರಣೆಯಿತ್ತು. ದೇಶೀಯ ಸಂಸ್ಥಾನಗಳಲ್ಲಿ ಕೇವಲ ಖಾದಿ ಪ್ರಚಾರ, ಹಿಂದಿ ಪ್ರಚಾರದ ಕಡೆ ಗಮನಿಸಿ ಎಂದು ಸ್ವತ: ಗಾಂಧೀಜಿಯವರೇ ಹೇಳಿದ್ದರು. ಇಂತಹ ಪರಿಸ್ಥಿತಿಯಲ್ಲಿ ದೇಶೀಯ ಸಂಸ್ಥಾನಗಳ ಪೈಕಿ ಕಾಂಗ್ರೆಸ್‌ನ ಹೋರಾಟಕ್ಕೆ ನಾಂದಿಯಾದದ್ದು ಮೈಸೂರಿನ ಸಂಸ್ಥಾನವೇ ಎಂಬುದು ಹೆಮ್ಮೆಯ ವಿಷಯ.
- ೧೯೦೫ರಲ್ಲಿ ಲಾರ್ಡ್ ಕರ್ಜನ್ ಬಂಗಾಳದ ವಿಭಜನೆಯನ್ನು ಘೋಷಿಸಿದಾಗ ಅದರ ವಿರುದ್ಧ 'ವಂಗ-ಭಂಗ' ಚಳುವಳಿ ನಡೆಯಿತು.ಇದರ ಜೊತೆಗೆ ಸ್ವದೇಶಿ ಚಳುವಳಿ ಕೂಡ ಪ್ರಸಿದ್ಧವಾಯಿತು. ಸ್ವದೇಶಿ ಚಳುವಳಿಯಿಂದ ಸ್ಫೂರ್ತಿ ಪಡೆದ ಬೆಂಗಳೂರಿನ ಕೆ.ಶೇಷ ಅಯ್ಯರ್ ಎಂಬುವರು 'ಇಂಡಿಯನ್ ಸ್ವದೇಶಿ ಸ್ಟೋರ್ಸ್' ತೆರೆದು ಸ್ವದೇಶಿ ವಸ್ತುಗಳ ಮಾರಾಟ ಆರಂಭಿಸಿದರು.ವಿದೇಶಿ ವಸ್ತುಗಳ ಬಹಿಷ್ಕಾರ-ಸ್ವದೇಶಿ ವಸ್ತುಗಳ ಬಳಕೆಯ ಬಗ್ಗೆ ಜಾಗೃತಿಗೆ ಇದು ಬೆಂಗಳೂರಿನಲ್ಲಿ ನಾಂದಿಯಾಯಿತು.
- ೧೯೨೦ರಲ್ಲಿ ಲೋಕಮಾನ್ಯ ತಿಲಕರು ತೀರಿಕೊಂಡಾಗ ಇಡಿ ದೇಶದ ಜನತೆ ದು:ಖತಪ್ತವಾಯಿತು. ಮೈಸೂರಿನ ಸಂಸ್ಥಾನದಲ್ಲಿ ಅನೇಕ ಕಡೆ ಸಂತಾಪ ಸೂಚಕ ಸಭೆಗಳಾದವು. ತಿಲಕರ ನಿಧನದ ಹತ್ತನೇ ದಿನ ಬೆಂಗಳೂರಿನ ಸಹಸ್ರಾರು ಜನರು ಕರ್ಪೂರ ಶ್ರೀನಿವಾಸರಾಯರ ನೇತೃತ್ವದಲ್ಲಿ ಧರ್ಮಾಂಬುಧಿ ಕೆರೆಗೆ ಹೋಗಿ ಧರ್ಮೋದಕ ನೀಡಿದರು. ಇದಾದ ನಂತರ 'ತಿಲಕ್ ಯೂನಿಯನ್' ಎಂಬ ಸಂಸ್ಥೆಯು ಸ್ಥಾಪಿತವಾಗಿ ಮುಂದೆ ಅದೇ ಕಾಂಗ್ರೆಸ್ ರೂಪ ತಾಳಿತು.
- ಅನೇಕ ರಾಷ್ಟ್ರೀಯ ನಾಯಕರು ಆಗಾಗ ಸಂಸ್ಥಾನಗಳಿಗೆ ಆಗಮಿಸಿ



ತಮ್ಮ ಭಾಷಣ ಮತ್ತು ಸಂಪರ್ಕಗಳಿಂದ ಜನಜಾಗೃತಿ ಮಾಡುತ್ತಿದ್ದರು. ಇದರಿಂದಾಗಿ ಜನತೆ ಹಾಗೂ ರಾಜಮನೆತನದವರ ಮೇಲೆ ನೇರ ಪರಿಣಾಮ ಬೀರುತ್ತಿತ್ತು. ಗಾಂಧೀಜಿ, ನೆಹರು, ಸರೋಜಿನಿ ನಾಯ್ಡು, ಸರ್ದಾರ್ ಪಟೇಲ್ ಇತ್ಯಾದಿ ಅನೇಕ ನಾಯಕರು ಬೆಂಗಳೂರಿಗೆ ಪ್ರವಾಸ ಮಾಡಿದ್ದರು.

- ಗಾಂಧೀಜಿಯವರು ೧೯೧೫, ೧೯೨೦, ೧೯೨೭, ೧೯೩೪ ಹಾಗೂ ೧೯೩೬ರಲ್ಲಿ ಬೆಂಗಳೂರಿಗೆ ಒಟ್ಟು ೫ ಬಾರಿ ಬಂದಿದ್ದಾರೆ. ಗಾಂಧೀಜಿ ಪ್ರವಾಸದಿಂದ ಬೆಂಗಳೂರಲ್ಲಿ ಖಾದಿ ಅಭಿವೃದ್ಧಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕಿತು. ಮಹಾತ್ಮಾ ಗಾಂಧಿಯವರು ಹರಿಜನೋದ್ಧಾರಕ್ಕಾಗಿ ಮಾಡಿದ ಒಂದು ಪ್ರವಾಸದಲ್ಲಿ ಮೈಸೂರು ಸಂಸ್ಥಾನದ ಜನತೆ ೬೦ ಸಾವಿರ ರೂಪಾಯಿಯಷ್ಟು ನಿಧಿ ಸಮರ್ಪಣೆ ಮಾಡಿದರು. ಮುಂದಿನ ರಾಷ್ಟ್ರೀಯ ಚಳುವಳಿಗೆ ಸೂಕ್ತ ಪರಿಸರ ನಿರ್ಮಾಣವಾಯಿತು.
- ೧೯೨೦ರಲ್ಲಿ ಖಿಲಾಫತ್ ಕಮಿಟಿ ಬೆಂಗಳೂರಿನ ದಂಡು ಪ್ರದೇಶದಲ್ಲಿ ಸ್ಥಾಪಿತವಾಗಿ, ಮುಂದೆ ಅದು ಕಾಂಗ್ರೆಸ್ ಜೊತೆ ಕೆಲಸ ಮಾಡಿತು. ೧೯೨೦ರ ಕೊನೆಯಲ್ಲಿ ಬೆಂಗಳೂರಿಗೆ ಗಾಂಧೀಜಿ ಹಾಗೂ ಶೌಕತ್ ಅಲಿ ಅವರ ಭೇಟಿ, ಭಾಷಣ ನಡೆಯಿತು. ಆಗ ದಂಡು ಪ್ರದೇಶದ ಮುಸಲ್ಮಾನರು ಖಿಲಾಫತ್ ಚಳುವಳಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಈ ಚಳುವಳಿಯಲ್ಲಿ ಹಿಂದೂಗಳೂ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಪ್ರತ್ಯಕ್ಷ ಭಾಗವಹಿಸಿದ ಜೀವಣ್ಣ ರಾವ್ ಅವರು ತಮ್ಮ ಅನುಭವವನ್ನು ಹೀಗೆ ದಾಖಲಿಸಿದ್ದಾರೆ: "...ದಂಡಿನ ರೈಲ್ವೆ ನಿಲ್ದಾಣದ ಬಳಿ ದೊಡ್ಡ ಮಾವಿನ ತೋಪಿನಲ್ಲಿ ಗಾಂಧೀಜಿಯವರ ಭಾಷಣದ ಕಾರ್ಯಕ್ರಮ. ಭಾರಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರು. ಶ್ರೇಷ್ಠಮಟ್ಟದ ಸಭಾ ವ್ಯವಸ್ಥೆ ಆಗಿತ್ತು. ಸೇಲಂನಿಂದ ಸಂಜೆ ಗಾಂಧೀಜಿ ಹಾಗೂ ಶೌಕತ್ ಅಲಿ ಬಂದರು. ಅವರಿಗೆ ಅದ್ಭುತ ಸ್ವಾಗತವಾಯಿತು. ನಂತರ ಭಾಷಣಕ್ಕೆ ಮಳೆಯಿಂದ ಅಡ್ಡಿಯಾದರೂ ಜನ ಚದುರಲಿಲ್ಲ.

ಗಾಂಧೀಜಿಯವರು ಮಳೆಯಲ್ಲೇ ಭಾಷಣ ಮಾಡಿದರು. ನಂತರ ಶೌಕತ್ ಅಲಿ ಕೂಡ ಮಾತಾಡಿದರು...". ಇದು ನಡೆದ ಜಾಗ ಇಂದಿನ ಶಿವಾಜಿನಗರದ ಮಿಲ್ಲರ್ಸ್ ರಸ್ತೆಯಲ್ಲಿ. ಗಾಂಧಿಜಿಯವರ ಕೇವಲ ಅರ್ಧ ದಿನದ ಈ ಪ್ರವಾಸದಲ್ಲಿ ಕಂಟೋನ್ಮೆಂಟ್ ನಲ್ಲಿ ಸುಮಾರು ೪೦ ಸಾವಿರ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

- ಖಿಲಾಫತ್ ಚಳುವಳಿ ಬಲವಾಗಿ ನಡೆಯಿತು, ದಂಡು ಪ್ರದೇಶದಲ್ಲಿ (ಕಮರ್ಷಿಯಲ್ ಸ್ಟ್ರೀಟ್) ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದ ಇಬ್ಬರು ಮುಸ್ಲಿಂ ತರುಣರನ್ನು ೧೯೨೧ರಲ್ಲಿ ಪೋಲಿಸರು ಬಾಯೋನೆಟ್ ನಿಂದ ಇರಿದು ಕೊಂದರು.

- ೧೯೨೧ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಆಗಮಿಸಿದಾಗ ಬೆಂಗಳೂರಲ್ಲಿ ಪ್ರಚಂಡ ಹರತಾಳ ಆಯಿತು. ದಂಡು ಪ್ರದೇಶದ ಬ್ರಾಡ್ವೇಯಲ್ಲಿ ಗೋಲಿಬಾರ್ ಆಗಿ ದಸ್ತಗೀರ್, ಅಬ್ದುಲ್ ರಜಾಕ್ ಎಂಬಿಬ್ಬರು ತರುಣರು ಮೃತಪಟ್ಟರು, ಅನೇಕರಿಗೆ ಗಾಯವಾಯಿತು, ಮೊಕದ್ದಮೆಗಳಾಗಿ ಅನೇಕರಿಗೆ ಶಿಕ್ಷೆ ಆಯಿತು. ವಿದೇಶಿ ಬಟ್ಟೆಗಳನ್ನು ಮಾರುವ ಅಂಗಡಿಗೆ ಅಡ್ಡಲಾಗಿ ಕುಳಿತವರನ್ನು ಚದುರಿಸಲು ಸೈನಿಕರು ಬಂದೂಕಿನ ಮೊನೆಯಿಂದ ತಿವಿದು ಗಾಯಗೊಳಿಸಿದರು, ಇನ್ನೂ ಕೆಲವರನ್ನು ಹಿಡಿದು ಅವರಿಗೆ ಒಂಬತ್ತು ತಿಂಗಳು ಶಿಕ್ಷೆ ವಿಧಿಸಲಾಯಿತು.

- ೧೯೨೭ರಲ್ಲಿ ಮಹಾತ್ಮ ಗಾಂಧೀಜಿಗೆ ಅನಾರೋಗ್ಯವಾಗಿದ್ದಾಗ, ದಿವಾನ್ ಮಿರ್ಜಾ ಇಸ್ಮಾಯಿಲ್ ಆವರ ಆಮಂತ್ರಣದ ಮೇರೆಗೆ ಕೆಲಕಾಲ ನಂದಿಬೆಟ್ಟದಲ್ಲಿ ವಿಶ್ರಾಂತಿಗಾಗಿ ಬಂದಿದ್ದರು. ನಂದಿಬೆಟ್ಟದಲ್ಲಿ ತಂಗಿದ್ದಾಗ, ಬೆಂಗಳೂರಿನ ಅನೇಕ ಗಣ್ಯ ವ್ಯಕ್ತಿಗಳು ಅವರನ್ನು ಭೇಟಿ ಮಾಡಿ ಅವರ ವಿಚಾರದಿಂದ ಪ್ರಭಾವಿತರಾದದ್ದು ಅಲ್ಲದೇ ಖಾದಿ ದೀಕ್ಷೆ ತೊಟ್ಟರು. ಮುಂದೆ ಗಾಂಧೀಜಿಯವರು ಬೆಂಗಳೂರಿನಲ್ಲಿ ವಸತಿ ಮಾಡಿ ನಿತ್ಯ ಪ್ರಾರ್ಥನಾ ಸಭೆಗಳನ್ನೂ ನಡೆಸಿದರು.



- ೧೯೨೮ರಲ್ಲಿ ಮೈಸೂರು ಕಾಂಗ್ರೆಸ್‌ನ ಸಭೆ ಸೇರಿದಾಗ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮುಂದಿಟ್ಟಿತು, ೧೯೨೯ರಲ್ಲಿ ಡಾ॥ ಎನ್.ಎಸ್. ಹರ್ಡೀಕರ್ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಭಾಷಣ ಮಾಡಬಾರದು ಎಂದು ಸರ್ಕಾರ ಆಜ್ಞೆ ವಿಧಿಸಿತು.

- ೧೯೩೦ರಲ್ಲಿ ಮಹಾತ್ಮಾ ಗಾಂಧಿಯವರ ಬಂಧನವಾದ ಮೇಲೆ ಅಸಹಕಾರ ಚಳುವಳಿ ಆರಂಭವಾಯಿತು. ಬೆಂಗಳೂರಿನ ದಂಡಿನ ಪ್ರದೇಶದಲ್ಲಿ ನಡೆದ ಚಳುವಳಿಯಲ್ಲಿ ಶ್ರೀಕಂಠ, ಎಂ.ಆರ್.ಶೇಷಾದ್ರಿ, ಜಿ.ಆರ್.ಸ್ವಾಮಿ, ಮುನಿಸ್ವಾಮಿ ಗೌಂಡರ್, ಚಂಗಲ್ವರಾಯನ್, ಶೆಲ್ವರಾಜ್ ಇವರುಗಳು ಭಾಗವಹಿಸಿದ್ದರು. ಇದಕ್ಕಾಗಿ ಇವರೆಲ್ಲರ ಬಂಧನವಾಗಿ, ೨ ವರ್ಷ ಜೈಲು ಶಿಕ್ಷೆಯಾಯಿತು. ದಂಡುಪ್ರದೇಶದ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಅಡ್ಡ ಕೂತವರನ್ನು ತಂಡ–ತಂಡವಾಗಿ ಬಂಧಿಸಿ ಮದ್ರಾಸ್, ಮುಂಬಯಿ ಕರ್ನಾಟಕದ ವಿವಿಧ ಜೈಲುಗಳಲ್ಲಿ ಇಟ್ಟರು.

- ಉಪ್ಪಿನ ಮೇಲೆ ಹೇರಿದ ತೆರಿಗೆ ಹಾಗೂ ಉಪ್ಪಿನ ಉತ್ಪಾದನೆ ಸರಕಾರಿ ಗುತ್ತಿಗೆಯಾದದ್ದು ಉಪ್ಪಾರರಿಗೂ ಭಾರಿ ಹೊಡೆತ ಕೊಟ್ಟಿತು. ಈಗಿನ ವೈಟ್ ಫೀಲ್ಡ್ ಪ್ರದೇಶದಲ್ಲಿ ಕಲ್ಲುಪ್ಪಿನ ಉತ್ಪಾದನೆ ಭಾರಿ ಪ್ರಮಾಣದಲ್ಲಿ ಆಗುತ್ತಿದ್ದರ ಉಲ್ಲೇಖವಿದೆ. ಇದೆಲ್ಲಾ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಮತ್ತಷ್ಟು ವೇಗ ಸಿಕ್ಕಿತು.

- ೧೯೩೧ ರಲ್ಲಿ ಅಸಹಕಾರ ಚಳುವಳಿ ಮತ್ತೆ ಶುರುವಾಯಿತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ನಿಷೇಧಿಸಿ, ಧಾರವಾಡದ ಕಾಂಗ್ರೆಸ್ ಕಛೇರಿಯನ್ನು ಮುಚ್ಚಿದ್ದರಿಂದ ಆ ಸಮಿತಿಯ ಕಾರ್ಯಕಲಾಪಗಳೆಲ್ಲಾ ಬೆಂಗಳೂರಲ್ಲಿ ಗೋಪ್ಯವಾಗಿ ನಡೆಯುತ್ತಿತ್ತು.

- ೧೯೩೧ರಲ್ಲಿ ನೆಹರೂ ಅವರ ಭೇಟಿ ಹಾಗು ಭಾಷಣದಿಂದ ಸ್ಫೂರ್ತಿ ಹೊಂದಿದ ಕಂಟೋನ್ಮೆಂಟ್ ಪ್ರಜೆಗಳು 'ನೆಹರು ಸೇವಾ ಸಂಘಂ' ಮತ್ತು 'ಗಾಂಧಿ ಚರಕಾ ಸಂಘಂ' ಸ್ಥಾಪಿಸಿ ತಾವೂ ರಾಷ್ಟ್ರೀಯ ಚಳುವಳಿಯಲ್ಲಿ ಭಾಗಿಗಳಾದರು.

- ೧೯೩೫ಕ್ಕೆ ಕಾಂಗ್ರೆಸ್ ಪ್ರಾರಂಭವಾಗಿ ೫೦ನೇ ವರ್ಷ ತುಂಬಿತು, ಅದಕ್ಕಾಗಿ ದೇಶಾದ್ಯಂತ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ್ದು, ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಸಾವಿರಾರು ತರುಣ–ತರುಣಿಯರು ಪಾಲ್ಗೊಂಡರು, ಕಂಟೋನ್ಮೆಂಟಿನಲ್ಲೂ ಇದರ ಹಲವು ಕಾರ್ಯಕ್ರಮಗಳಾದವು.

- ೧೯೪೦ರಲ್ಲಿ ಕಂಟೋನ್ಮೆಂಟ್ ಮುನಿಸಿಪಾಲಿಟಿಗೆ ನಡೆದ ಚುನಾವಣೆಯಲ್ಲಿ ೭ ಕಾಂಗ್ರೆಸಿಗರು ಆಯ್ಕೆಯಾದರು. ಇದರ ಹಿಂದೆಯೇ ಕಂಟೋನ್ಮೆಂಟ್‌ನ ಇಂಪೀರಿಯಲ್ ಟೊಬ್ಯಾಕೋ ಕಂಪನಿಯಲ್ಲಿ ೧೯೪೦ರ ಏಪ್ರಿಲ್‌ನಲ್ಲಿ ಮುಷ್ಕರವಾದಾಗ ನೆಹರೂ, ಸುಭಾಷಚಂದ್ರ ಬೋಸರೂ ಈ ಮುಷ್ಕರಕ್ಕೆ ಬೆಂಬಲ ಹೇಳಿಕೆ ನೀಡಿದರು.

- ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ 'ಹಿಂದೂಸ್ಥಾನ್ ಏರ್ ಕ್ರಾಫ್ಟ್' ಕಾರ್ಖಾನೆಯ ನೌಕರರು ಮುಷ್ಕರ ಹೂಡಿ ಕಾರ್ಖಾನೆಯಿಂದ ನಗರದವರೆಗೆ ಮೆರವಣಿಗೆಯಲ್ಲಿ ಬಂದು ೪೦೦೦ ಜನ ಕಾರ್ಮಿಕರ ಸಭೆ ಸಂಪಂಗಿ ಕೆರೆಯಲ್ಲಿ ನಡೆಯಿತು. ಎಚ್.ಎ.ಎಲ್ ನಲ್ಲಿ ಗಣ್ಯ ಹುದ್ದೆಯಲ್ಲಿದ್ದ ಎಂ.ಎಚ್. ಷಾ ಅವರು ನೌಕರಿಗೆ ರಾಜೀನಾಮೆ ನೀಡಿ ಭೂಗತರಾದರು. ಎಂ.ಸಿ. ವೇಣುಗೋಪಾಲ್, ಎನ್.ಡಿ. ಶಂಕರ್., ಪ್ರಭುದೇವ್ ಇತ್ಯಾದಿ ಎಲ್ಲರೂ ಸೇರಿ ಚಳುವಳಿ ಮುಂದುವರೆಸಿದರು. ಬೆಂಗಳೂರು ನಗರದ ಗೋಡೆಗಳ ಮೇಲೆಲ್ಲಾ 'ಕ್ವಿಟ್ ಇಂಡಿಯಾ' ಘೋಷಣೆ ಬರೆಯಲಾಯಿತು. ಕಂಟೋನ್ಮೆಂಟ್‌ನಲ್ಲಿ ಸೇನೆಗಾಗಿ ಹಾಲು, ಬೆಣ್ಣೆ, ತರಕಾರಿ ಮಾರಬಾರದೆಂದು ಕೂಡ ಪ್ರಚಾರ ನಡೆಯಿತು.

- ಕಾರ್ಮಿಕ ಸಂಘಟನೆಗಳು ಮೊದಲಿನಿಂದಲೂ ಹೋರಾಟಕ್ಕೆ ಬದ್ಧರಾಗಿದ್ದರು. ಅವು ಹೆಚ್ಚು ಕ್ರಿಯಾಶೀಲವಾದುದು ೧೯೩೦–೩೫ರ ಸಮಯದಲ್ಲಿ. ೧೯೨೬ರ ಬಿನ್ನಿಮಿಲ್ ಮುಷ್ಕರದಲ್ಲಿ ಗುಂಡು ಹಾರಿಸಿದ ಪ್ರಕರಣ ಉಳಿದ ಕಾರ್ಖಾನೆಗಳಲ್ಲಿ ಸ್ಫೂರ್ತಿ ನೀಡಿತು. ಅದಾಗಲೇ ಬಿನ್ನಿಮಿಲ್ ಕಾರ್ಮಿಕ ಸಂಘ ಬಲಿತು ಬೆಳೆದಿತ್ತು. ಅದೇ ರೀತಿ ಇತರ



ಕಾರ್ಖಾನೆ, ಮಿಲ್‌ಗಳಲ್ಲಿ ಕಾರ್ಮಿಕ ಸಂಘಗಳು ಹುಟ್ಟಿ ತಮ್ಮ ವರ್ಗದವರ ಹಕ್ಕು ಬಾಧ್ಯತೆಗಳ ಜೊತೆಗೆ ಸ್ವಾತಂತ್ರ ಹೋರಾಟಕ್ಕಾಗಿಯೂ ಕಟಿಬದ್ಧರಾದರು. ಈ ರೀತಿಯಲ್ಲಿ ಕಾರ್ಮಿಕರು ಮುಂದಿನ ಸ್ವಾತಂತ್ರ್ಯ ಚಳುವಳಿಯ ಪ್ರತಿ ಹಂತದಲ್ಲೂ ಭಾಗವಹಿಸಿ ಸಕ್ರಿಯರಾದರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನೌಕರರ ಮುಷ್ಕರದಿಂದ ಹಲವರು ನೌಕರಿ ಕಳೆದುಕೊಂಡರು, ಅನೇಕರು ನೋವು, ಪೆಟ್ಟಿನಿಂದ ಬಹಳಕಾಲ ನರಳಿದರು, ಈ ಚಳುವಳಿಗಳ ಬೆಂಗಳೂರಿನ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳ ಕೊಡುಗೆ ಮಹತ್ವದ್ದು. ೧೯೪೨ ರಿಂದ ೪೪ ವರೆಗೆ ಮೈಸೂರು ಸಂಸ್ಥಾನದಲ್ಲಿ ೧೦,೦೦೦ ಜನರನ್ನು ಬಂಧಿಸಿದ್ದರು, ಬೆಂಗಳೂರು ನಗರದಲ್ಲಿ ಒಂದೇ ಕಡೆ ಈ ಸಂಖ್ಯೆ ೨೦೦೦ ಇರಬೇಕು ಎಂದು ಅಂದಾಜು ಮಾಡಲಾಗಿದೆ.

- ಬೆಂಗಳೂರಿನ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಬಳಿ ಒಬ್ಬ ಪಂಜಾಬಿ ಕಾವಲುಗಾರ ಮತ್ತು ಒಬ್ಬ ಬ್ರಿಟಿಷ್ ಸೇನಾಧಿಕಾರಿಗಳ ನಡುವೆ ಜಗಳವಾಗಿ ಬ್ರಿಟಿಷ್ ಅಧಿಕಾರಿ ಕೊಲ್ಲಲ್ಪಟ್ಟ. ಮರುದಿನ ಇಬ್ಬರು ಪಂಜಾಬಿ ಸೈನಿಕರನ್ನು ಗುಂಡಿಟ್ಟು ಕೊಂದರು. ಈ ರೀತಿ ಪ್ರಕರಣಗಳು ಸರ್ವೇ ಸಾಧಾರಣವಾಗಿತ್ತು.

- ಬೇರೆ ಪ್ರಾಂತ್ಯದಲ್ಲಿ ಕೋರ್ಟ್ ಮಾರ್ಶಲ್‌ಗೆ ಒಳಪಟ್ಟು ಮರಣದಂಡನೆಗೆ ಒಳಗಾದ ೯ ಸೈನಿಕರಿಗೆ ಶಿಕ್ಷೆ ವಿಧಿಸಲು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ತಂದಿದ್ದರು. ತಮ್ಮ ಸಾವಿಗೂ ಮುನ್ನ ತಮ್ಮ ಜನಿವಾರ ಬದಲಾಯಿಸಲು ಅವಕಾಶ ನೀಡಬೇಕೆಂದು ಈ ಸೈನಿಕರು ತಮ್ಮ ಕೊನೆಯ ಆಸೆ ವ್ಯಕ್ತಪಡಿಸಿದರು. ಜನಿವಾರ ತೊಡಿಸುವ ಪೌರೋಹಿತ್ಯಕ್ಕೆ ಒಪ್ಪಿದವರು ಆಗ ಅಲ್ಲಿ ಬಂಧನದಲ್ಲಿದ್ದ ಖ್ಯಾತ ಲೇಖಕರಾದ ಗೊರೂರು ರಾಮಸ್ವಾಮಿ ಐಯ್ಯಂಗಾರರು. ಜನಿವಾರ ತೊಡಿಸುವ ವಿಧಿಯ ನಡುವೆ ಉಪಾಯವಾಗಿ ಅವರಲ್ಲಿ ೮ ಜನರ ಹೆಸರನ್ನು ಗೊರೂರರು ತಿಳಿದುಕೊಂಡು ದಾಖಲಿಸಿದರು. ಆ ಹೆಸರುಗಳು ಫಣಿ ಚಕ್ರವರ್ತಿ,

ಎಲ್.ಮುಖರ್ಜಿ, ಎನ್. ಭಾಷಾನಿ (ಈತ ಮುಸಲ್ಮಾನ ಇರಬಹುದು) ಹೆಚ್. ಕಾಳೀಪತ್, ಡಿ.ಕೆ. ನಂದ, ದುರ್ಗಾದಾಸ್ ಪಂತ್, ಮುಖರ್ಜಿ ಮತ್ತು ಮಲೀಕುಮಾರ್ ಠಾಕೂರ್. ಸೆಂಟ್ರಲ್ ಜೈಲಿನ ಅಧಿಕಾರಿಗಳು ಫಾಸಿಗೇರಿಸಲು ಒಪ್ಪದಿರಲು ಈ ಅನಾಮಿಕ ದೇಶಭಕ್ತರನ್ನು ವೈಟ್‌ಫೀಲ್ಡ್‌ಗೆ ಒಯ್ದು ಗುಂಡಿಕ್ಕಿ ಕೊಂದರು.

'ಕ್ವಿಟ್ ಇಂಡೀಯಾ ಚಳುವಳಿ' ಬೆಂಗಳೂರಿನ ಜನಜೀವನದಲ್ಲಿ ಅಪಾರ ಬದಲಾವಣೆ ತಂದಿತು.ಕನಿಷ್ಟ ೫೦ ಸಾವಿರ ಜನರಾದರೂ ಸಭೆ, ಮೆರವಣಿಗೆ, ಹರತಾಳಗಳಲ್ಲಿ ಭಾಗವಹಿಸಿದ್ದರು.ಐದು ಸಾವಿರದಷ್ಟು ಜನ ಪೋಲಿಸರಿಂದ ಬಂಧಿತರಾಗಿ, ಎರಡು ಸಾವಿರದಷ್ಟು ಜನ ಜೈಲು ವಾಸ ಅನುಭವಿಸಿದರು. ಮಹಿಳೆಯರೂ, ವಿದ್ಯಾರ್ಥಿನಿಯರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದು ಅಪೂರ್ವವಾದ ಸಂಗತಿ.

ಇಡೀ ದೇಶದಲ್ಲಿ ನಡೆದ ಚಳುವಳಿ ಬ್ರಿಟಿಷರ ಸಿಂಹಾಸನ ನಡುಗಿಸಿದ್ದು ಮಾತ್ರ ನಿಜ. ಅದರ ಜೊತೆಗೆ ಬ್ರಿಟಿಷರು ೨ನೇ ಮಹಾಯುದ್ಧದಲ್ಲಿ ಗೆದ್ದಿದ್ದರೂ ಸಾಕಷ್ಟು ನಷ್ಟವನ್ನು ಅನುಭವಿಸಿದ್ದರು. ಅನಿವಾರ್ಯವಾಗಿ ಭಾರತ ಬಿಟ್ಟು ಹೊರಡಲೇಬೇಕಾದ ಪರಿಸ್ಥಿತಿ ಬ್ರಿಟೀಷರದ್ದಾಯಿತು.

೧೯೪೭ ಜುಲೈ ೨೬ರಂದು ದಂಡು ಪ್ರದೇಶವನ್ನು ಬ್ರಿಟಿಷರು ಮೈಸೂರಿನ ಮಹಾರಾಜರಿಗೆ ಹಸ್ತಾಂತರಿಸಿದರು. ಆಗಿನ ರೆಸಿಡೆಂಟ್ ಕ್ಯಾಂಪಬೆಲ್ ಕೂಡ ಆಗಸ್ಟ್ ೧೫ಕ್ಕೆ ಭಾರತ ತ್ಯಜಿಸಿದರು.

❑

## ೯. ಬ್ರಿಟಿಷರ ವಿರುದ್ಧ ಹೋರಾಟ : ಪ್ರಮುಖ ನಾಯಕರು

ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಂಗಳೂರಿನ ಪಾತ್ರವನ್ನು ವಿವರಿಸುವಾಗ ಅನೇಕ ಮುಂದಾಳುಗಳು, ವ್ಯಕ್ತಿಗಳ, ಸಂಘಸಂಸ್ಥೆಗಳ, ಪತ್ರಿಕೋದ್ಯಮಿಗಳ, ವ್ಯಾಪರಿಗಳ ಹೆಸರುಗಳು ಬರುತ್ತವೆ.

- **ಮೋದಿ ಅಬ್ದುಲ್ ಗಫಾರ್**

  ೧೯೨೧ರಲ್ಲಿ ಕಾಂಗ್ರೆಸ್ ಕಮಿಟಿ ಬೆಂಗಳೂರಲ್ಲಿ ಸ್ಥಾಪಿತವಾಗಿ ಮೋದಿ ಅಬ್ದುಲ್ ಗಫಾರ್ ಅಧ್ಯಕ್ಷರಾಗಿಯೂ, ರಿಜ್ವಿ ಕಾರ್ಯದರ್ಶಿಗಳಾಗಿ ಚುನಾಯಿತರಾದರು. ಸರ್ಕಾರಿ ಶಾಲೆಗಳಿಗೆ ಬಹಿಷ್ಕಾರ ಹಾಕಬೇಕೆಂಬ ಕರೆ, ಕಂಟೋನ್ಮೆಂಟ್‌ನಲ್ಲಿ ರಾಷ್ಟೀಯ ಶಾಲೆಯ ಆರಂಭವಾದ ನಂತರ ಕಾಂಗ್ರೆಸಿನ ಅನೇಕ ಚಟುವಟಿಕೆಗಳು ಮುಂದುವರೆದವು. ಉದಾ:– ತಿಲಕ್ ಸ್ವರಾಜ್ಯ ಫಂಡ್‌ಗೆ ದೇಣಿಗೆ, ಖಾದಿ ಪ್ರಚಾರ, ದುರೀಣರ ಭಾಷಣ ಕಾರ್ಯಕ್ರಮಗಳು ಇತ್ಯಾದಿ.

  "....ಅಂಗೋರ ಮೋದಿ ಅಬ್ದುಲ್ ಗಫೂರ್ ಎಂಬುವವರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದು ತಿಂಗಳಿಗೆ '೫೦ ರೂಪಾಯಿ' ನಂತೆ ಕಾಣಿಕೆಯನ್ನು ಕಾಂಗ್ರೆಸ್ಸಿಗೆ ಬಹುಕಾಲ ಕೊಡುತ್ತಿದ್ದರು.."ಎಂದು ಜೀವಣ್ಣ ರಾವ್ ನೆನಪಿಸಿಕೊಳ್ಳುತ್ತಾರೆ.ಸುಮಾರು ನೂರು ವರ್ಷದ ಹಿಂದೆ ೫೦ ರೂಪಾಯಿ ಎಂದರೆ ಈಗಿನ ಕಾಲದಲ್ಲಿ ಹತ್ತಾರು ಸಾವಿರ ರೂಪಾಯಿಗಳಿಗೆ ಸಮವಾಗಬಹುದು.ಈ ರೀತಿ ಅನೇಕರು ನೆರವು ನೀಡಿ ಸ್ವಾತಂತ್ರ್ಯ ಹೋರಾಟಕ್ಕೆ ಪೂರಕ ವ್ಯವಸ್ಥೆಗಳನ್ನು ಮಾಡಿದ್ದರು.

- **ಹಾಜಿ ಉಸ್ಮಾನ್ ಸೇಠ್**

ದಂಡು ಪ್ರದೇಶದಲ್ಲಿ ಖಿಲಾಪತ್ ಚಳುವಳಿ ಹಾಜಿ ಉಸ್ಮಾನ್ ಸೇಠ್ ಎಂಬುವರ ನೇತೃತ್ವದಲ್ಲಿ ರಭಸದಿಂದ ನಡೆಯಿತು. ಸೇಠರು ಒಬ್ಬ ಗಣ್ಯ ಶ್ರೀಮಂತ ವ್ಯಾಪಾರಿಗಳು. ಹಾಜಿ ಉಸ್ಮಾನ್ ಸೇಠ್ ಅವರು ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಿದವರಿಗಾಗಿ ೧೯೨೧ ರಲ್ಲಿ ಖಿಲಾಫತ್ 'ರಾಷ್ಟ್ರೀಯ ಶಾಲೆ'ಯನ್ನು ಇದೇ ಕಾಲದಲ್ಲಿ ತೆರೆದರು. ಸ್ವಂತ ವೆಚ್ಚದಿಂದ ಇದನ್ನು ನಡೆಸಿದರು. ನಗರದ ಹಾಗೂ ದಂಡು ಪ್ರದೇಶದ ಕೆಲವು ವಿದ್ಯಾರ್ಥಿಗಳು ಈ ಶಾಲೆಯನ್ನು ಸೇರಿಕೊಂಡರು. ಹಣದ ಕೊರತೆಯಿಂದಾಗಿ ತುಂಬಾ ವರ್ಷ ಇದನ್ನು ನಡೆಸಲು ಆಗಲಿಲ್ಲವಾದರು ಅವರ ಪ್ರಯತ್ನ ಇಲ್ಲಿ ಸ್ತುತ್ಯರ್ಹ. ಸೇಠರು ಖಿಲಾಫತ್ ಹಾಗೂ ಕಾಂಗ್ರೆಸ್ ಚಳುವಳಿಯಿಂದಾಗಿ ಅಪಾರ ಕಷ್ಟ–ನಷ್ಟ ಅನುಭವಿಸಿದರೂ ತಮ್ಮ ಸಹಕಾರ ಮುಂದುವರೆಸಿದ್ದರು.

- **ಮಹಾಜನ ಸಂಘ**

ದಂಡುಪ್ರದೇಶದಲ್ಲಿ ವರ್ತಕ ಗುಮಾಸ್ತ ಸಂಘ ಶುರುವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಶುರುಮಾಡಿತು.ಅನೇಕ ವರ್ತಕರನ್ನು ಹೋರಾಟದಲ್ಲಿ ತೊಡಗಿಸುವಲ್ಲಿ ಈ ಸಂಘ ಸಾಕಷ್ಟು ಕೆಲಸ ಮಾಡಿದೆ.ಕೊನೆಗೆ ಈ ಸಂಘ 'ಮಹಾಜನ ಸಂಘ'ವೆಂದು ಪರಿವರ್ತಿತವಾಯಿತು.

- **ಜೀವಣ್ಣ ರಾವ್**

ಜನಸಾಮಾನ್ಯರೂ ಹೇಗೆ ಈ ಸಂದರ್ಭದಲ್ಲಿ ಸಹಕಾರ ನೀಡುತ್ತಿದ್ದರು ಎಂಬುದು ಶ್ರೀ ಜೀವಣ್ಣ ರಾವ್ ಅವರ ನೆನೆಪಿನ ಬುತ್ತಿಯಲ್ಲಿ ತಿಳಿಯುತ್ತದೆ "ನಾನು, ಜಿ.ಎ. ಆಚಾರ್ಯ, ಎಂ.ಶ್ರೀನಿವಾಸಾಚಾರ್ಯ ಇವರೆಲ್ಲಾ ಆಗ ಉತ್ಸಾಹಿ ಸ್ವಯಂಸೇವಕರಾಗಿ ಮನೆಮನೆಗೆ ಹೋಗಿ ತಿಲಕ್ ಸ್ವರಾಜ್ಯ ನಿಧಿಗೆ ಹಣ ಸಂಗ್ರಹಿಸುವುದು, ಸಾರ್ವಜನಿಕ ಸಭೆಗಳಲ್ಲಿ ಹಣ ಸಂಗ್ರಹಿಸುವುದು ಮಾಡುತ್ತಿದ್ದೆವು. ಸಭೆಗಳಲ್ಲಂತೂ ಗಡಿಯಾರ,ಪೆನ್,ಉಂಗುರ ಇವುಗಳ ಕಾಣಿಕೆಯ ಸುರಿಮಳೆಯೇ ಆಗುತ್ತಿತ್ತು, ಆ ದೃಶ್ಯ ಮರೆಯಲಾಗದು. ಹೆಂಗಸರು ತಮ್ಮ ಆಭರಣಗಳನ್ನು ಕೊಡುತ್ತಿದ್ದರು..."




- **ಶಾಂತವೀರ್ ಚಂದ್**

ಖಾದಿ ಪ್ರಚಾರ, ಮನೆಮನೆಗೆ ಚರಕ, ಆಗಾಗ ಹಂಜಿಗಳನ್ನು ತೋರಿಸಿ ನೋಡುವಂತೆ ಪ್ರೋತ್ಸಾಹ ನೀಡಲಾಗುತ್ತಿತ್ತು.ಇದೆಲ್ಲದರ ಹಿಂದಿನ ಒಬ್ಬ ನಾಯಕರು ಶಾಂತವೀರ್ ಚಂದ್ ಅವರು, ಈ ಪ್ರದೇಶದಲ್ಲಿ ಈ ರೀತಿಯ ಹಲವು ಸಾಮಾಜಿಕ ಕಾರ್ಯಚಟುವಟಿಕೆಗೆ ತಳಪಾಯ ಹಾಕಿದವರು.

- **ಕೆ.ಟಿ.ಭಾಷ್ಯಂ**

ಬೆಂಗಳೂರಿನಲ್ಲಿ ಕಾರ್ಮಿಕರ ಸಂಘಟನೆ, ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ, ಕಾಂಗ್ರೆಸ್‌ನ ಚಟುವಟಿಕೆಗಳನ್ನು ಪ್ರಸ್ತಾಪಿಸುವಾಗ ಬರುವ ಪ್ರಮುಖ ಹೆಸರು ಕೆ.ಟಿ.ಭಾಷ್ಯಂ. ಅತ್ಯುತ್ತಮ ವಾಗ್ಮಿಗಳು, ಉತ್ತಮ ಸಂಘಟನಾಕಾರರು ಆಗಿದ್ದ ಭಾಷ್ಯಂ ಅವರು ಮಹತ್ತರ ಸೇವೆ ಸಲ್ಲಿಸಿದ್ದಾರೆ.೧೯೨೬ರ ಇಂಡಿಯನ್ ಟ್ರೇಡ್ ಯೂನಿಯನ್ ಮಸೂದೆ ಪ್ರಕಾರ ಬ್ರಿಟಿಷ್ ಆಡಳಿತ ಪ್ರಾಂತ್ಯದಲ್ಲಿ ಕಾರ್ಮಿಕರಿಗೆ ಸಂಘಟನೆಯ ಅವಕಾಶ ದೊರೆತಿತ್ತು. ಆದರೆ ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕರ ಸಂಘವನ್ನು ಮಾಡುವ ಅವಕಾಶ ಕೊಡಲಿಲ್ಲ. ಆ ಹಕ್ಕು ತಮಗೂ ಲಭಿಸಬೇಕೆಂದು ಕೆ.ಟಿ.ಭಾಷ್ಯಂ ನೇತೃತ್ವದಲ್ಲಿ ಬಿನ್ನಿ ಮಿಲ್ ಕಾರ್ಮಿಕರು ಮುಷ್ಕರ ಹೂಡಿದರು. ಮುಂದೆ ೧೯೩೯ರಲ್ಲಿ ಬಿನ್ನಿ ಮಿಲ್ ಕಾರ್ಮಿಕ ಸಂಘ ಸ್ಥಾಪನೆಯಾಗಿ ಕೆ.ಟಿ.ಭಾಷ್ಯಂ ಅವರೇ ಅದರ ಅಧ್ಯಕ್ಷರಾದರು. ಅದೇ ರೀತಿ ೧೯೩೭ರಲ್ಲಿ ಕಂಟೋನ್ಮೆಂಟಿನ ಸಿಗರೇಟು ಕಾರ್ಖಾನೆ

ಕಾರ್ಮಿಕರೂ ಮುಷ್ಕರ ಹೂಡಿದರು. ಇದಕ್ಕೂ ಕೆ.ಟಿ.ಭಾಷ್ಯಂ ಅವರೇ ಮಾರ್ಗದರ್ಶನ ನೀಡಿದರು. ಇವರೊಂದಿಗೆ ಕಾರ್ಮಿಕ ಸಂಘದ ಕಾರ್ಯದರ್ಶಿಯಾಗಿದ್ದವರು ಎಂ.ಎ.ಪರುಶುರಾಂ ಎಂಬ ಕಾರ್ಮಿಕರು.



ಇವರು ೧೯೩೩ರಲ್ಲೇ 'ದರಿದ್ರ ನಾರಾಯಣ ಸೇವಾ ಸಂಘ' ಎಂಬ ಸಂಘಟನೆ ಪ್ರಾರಂಭಿಸಿ ಆಗಿನ ಕಾಂಗ್ರೆಸ್ ಮೂಲ ತತ್ತ್ವಗಳನ್ನು ಜನಸಾಮಾನ್ಯರಿಗೆ ತಿಳಿಸುತ್ತಿದ್ದರು. ಹೀಗೆ ಭಾಷ್ಯಂ ನೇತೃತ್ವದ ಕಾರ್ಮಿಕ ಸಂಘಟನೆ ತನ್ನ ಹಕ್ಕು ಭಾದ್ಯತೆಗಳಿಗಾಗಿ ಹೋರಾಡಲು ಪ್ರಾರಂಭಿಸಿ ಕ್ರಮೇಣ ಸ್ವಾತಂತ್ರ್ಯ ಚಳುವಳಿಯಲ್ಲು ಧುಮುಕಿದ್ದು ಗಮನಿಸಬಹುದು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕಾರ್ಮಿಕ ಸಂಘಟನೆಗಳು ಕಾಂಗ್ರೆಸಿನ ಬೆನ್ನೆಲುಬಾದವು.



- **ಸೆಟ್ಲೂರ್**

ಬೆಂಗಳೂರು ನಗರ ಟೌನ್ ಕಾಂಗ್ರೆಸ್ ಅಧ್ಯಕ್ಷರಾದ ಸೆಟ್ಲೂರ್ ಅವರ ಪರಿಚಯ ಇಲ್ಲಿ ಅತ್ಯಂತ ಪ್ರಸ್ತುತವಾದೀತು. ಅವರೊಬ್ಬ ಅಸಾಧಾರಣ ವ್ಯಕ್ತಿ, ಪ್ರಸಿದ್ಧ ವಕೀಲರು, ಪಂಡಿತರು, ಸುಸಂಸ್ಕೃತರು ಉದಾರಿಗಳು, ಪತ್ರಕರ್ತರು ಹೌದು. ಅವರಿಗೆ ಲೋಕಮಾನ್ಯ ತಿಲಕರ ನಿಕಟ ಸಂಪರ್ಕವಿತ್ತು, ಕ್ರಾಂತಿಕಾರಿ ಅರವಿಂದ ಘೋಷ್ ಅವರೊಡನೆ ಕೂಡ ಸಂಪರ್ಕ ಇದ್ದದ್ದರಿಂದ ಬ್ರಿಟಿಷರಿಂದ ಅನೇಕ ಬಾರಿ 'ವಾರ್ನಿಂಗ್' ಪಡೆದಿದ್ದರು.ನಿಸ್ತೇಜವಾಗಿದ್ದ ಸಮಾಜವನ್ನು ಬಡಿದೆಬ್ಬಿಸುವ ಕಾರ್ಯ ಮಾಡಿದ ಸ್ವಾಮಿ ವಿವೇಕಾನಂದರನ್ನೂ ಭೇಟಿ ಮಾಡಿದ್ದರು. ಸ್ವಾಮಿ ವಿವೇಕಾನಂದರು ಅಮೇರಿಕಾಗೆ ಹೋಗುವ ಮುನ್ನ ಅವರಿಗೆ ಸೆಟ್ಲೂರ್ ಅವರು ಸತ್ಕಾರ ಏರ್ಪಡಿಸಿ ಶುಭಕೋರಿದ್ದು ಒಂದು ಉಲ್ಲೇಖನೀಯ ಪ್ರಸಂಗ.

- **ಆರ್.ಕೃಷ್ಣಯ್ಯ**

ಬೆಂಗಳೂರು ದಂಡು ಪ್ರದೇಶದಲ್ಲಿ ಕಾಂಗ್ರೆಸ್ ಚಟುವಟಿಕೆ ಬಲವಾಗಿ ನಡೆಯಲು ಮತ್ತೊಬ್ಬ ಪ್ರಮುಖ ರೂವಾರಿ ಆರ್.ಕೃಷ್ಣಯ್ಯರವರು. ಅವರು ಟಾಟಾ ಕಂಪನಿಯ ಏಜೆಂಟರಾಗಿ ಬೊಂಬಾಯಿಯಿಂದ ಬಂದು ನೆಲೆಸಿದರು. ಇವರಿಗೆ ರಚನಾತ್ಮಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿ. ಪುರಸಭಾ ಚುನಾವಣೆಯಲ್ಲಿ ದಂಡಿನ ಪ್ರಜೆಗಳು ಗೆದ್ದು ಸಾಧಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಸ್ನೇಹಿತರಾದ ರಾಜರತ್ನಂ ಅರುಣಾಚಲಂ ಅವರು ಕೂಡ ಇವರ ಜೊತೆ ದುಡಿದ ನಿಷ್ಠಾವಂತರು.

- **ಎಂ.ಎಂ. ದೇವರಾಜ ಚೆಟ್ಟಿಯಾರ್**

ದಂಡು ಪ್ರದೇಶದ ಮತ್ತೊಬ್ಬ ಹೋರಾಟಗಾರ ಎಂ.ಎಂ. ದೇವರಾಜ ಚೆಟ್ಟಿಯಾರ್. ಅವರ ಅನುಭವವನ್ನು ಹೀಗೆ ದಾಖಲಿಸಿದ್ದಾರೆ. "...

೧೯೨೪ ರಲ್ಲಿ ಮೆಟ್ರಿಕ್ ಪಾಸ್ ಆದ ಮೇಲೆ ಕಂಟೋನ್ಮೆಂಟ್ ಕಾಂಗ್ರೆಸ್ ಕಮಿಟಿಯಲ್ಲಿ ನಾಲ್ಕಾಣೆ ಸದಸ್ಯನಾದೆ. ಮುಂದೆ ೧೯೨೯ರಲ್ಲಿ ಕೆ.ಪಿ.ಸಿ.ಸಿ ಯ ಸದಸ್ಯನಾಗಿ ೧೯೪೭ರವರೆಗೆ ಮುಂದುವರೆದೆ. ಕಂಟೋನ್ಮೆಂಟ್ ನಲ್ಲಿ ಸತ್ಯಾಗ್ರಹ ಮಾಡಲು ಅನುಮತಿ ಇರದಿದ್ದರಿಂದ ಧಾರವಾಡಲ್ಲಿ ಸತ್ಯಾಗ್ರಹ ಮಾಡಿ ೨ ತಿಂಗಳು ಬೆಳಗಾವಿ ಸೆಂಟ್ರಲ್ ಜೈಲಿನಲ್ಲಿದ್ದೆ, ನಂತರ ೭ ತಿಂಗಳು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದೆ. ಬಿಡುಗಡೆಯಾದಾಗ ಕಂಟೋನ್ಮೆಂಟ್ ಪ್ರವೇಶಿಸದಂತೆ ರೆಸಿಡೆಂಟರು ಗಡಿಪಾರು ಆಜ್ಞೆ ಜಾರಿ ಮಾಡಿದರು. ಇದು ೧೯೪೬ ರವರೆಗೆ ಜಾರಿಯಲ್ಲಿತ್ತು...”

- **ಚೆಂಗಲರಾಯ ಮುದಲಿಯಾರ್**

ಕರನಿರಾಕರಣ ಸತ್ಯಾಗ್ರಹದ ಸಂದರ್ಭದಲ್ಲಿ ಇಲ್ಲಿನ ಜನರ ದೇಶಪ್ರೇಮ, ತ್ಯಾಗದ ಕಥೆ ಒಂದು ಗಮನಾರ್ಹವಾದ ಭಾಗ. ದಂಡಿನ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆ ಮುರಿದು ನಗರದ ದಂಡಿನ ಸುಮಾರು ೧೫೦ ಜನ ಶಿಕ್ಷಿಸಲ್ಪಟ್ಟರು. ದಂಡಿನ ಕೆಲವರು ಉತ್ತರ ಕನ್ನಡಕ್ಕೂ ಹೋಗಿದ್ದರು ಆ ಪೈಕಿ ಚೆಂಗಲರಾಯ ಮುದಲಿಯಾರ್ ಕೂಡ ಇದ್ದರು.

- **ಟಿ.ಸಚ್ಚಿದಾನಂದ ಶಿವಂ**

ದಂಡು ಪ್ರದೇಶದ ಕ್ಯಾವಲರಿ ರಸ್ತೆಯಲ್ಲಿ ವಾಸವಾಗಿದ್ದ ಶ್ರೀ ಟಿ. ಸಚ್ಚಿದಾನಂದ ಶಿವಂ ಅವರ ಬದುಕಂತೂ ತುಂಬಾ ಸಾಹಸಮಯವೂ ಪ್ರೇರಣಾದಾಯಕವೂ ಆಗಿದೆ. ಮದ್ರಾಸಿನಲ್ಲಿ ಜನಿಸಿದ ಇವರು ತಾರುಣ್ಯದಲ್ಲೇ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ೨ ಬಾರಿ ಬಂಧನಕ್ಕೂ ಒಳಗಾಗಿದ್ದರು. ಮದ್ರಾಸಿನ ‘ಸಂಗು’ ಎಂಬ ಪತ್ರಿಕೆಯಲ್ಲಿ ಭಗತ ಸಿಂಗ್, ಸಾವರ್ಕರ್ ಮುಂತಾದ ಕ್ರಾಂತಿಕಾರಿಗಳ ವಿಚಾರಗಳನ್ನು ಓದುತ್ತಿದ್ದರು. ೧೯೩೧ರಲ್ಲಿ ಭಗತ್ ಸಿಂಗ್‌ರನ್ನು ಗಲ್ಲಿಗೇರಿಸಿದಾಗ ಇವರ ರಕ್ತ ಕುದಿಯಿತು,



ಕ್ರಾಂತಿಮಾರ್ಗ ಹಿಡಿಯಬೇಕೆಂದು ‘ಭಗತ್ ಸಿಂಗ್ ವಾಲೆಂಟಿಯರ್ಸ್’, ‘ಸತ್ಯವೀರ ದಳ’ ಎಂಬ ಸಂಘಟನೆಗಳನ್ನು ಮದ್ರಾಸಿನಲ್ಲಿ ಆರಂಭಿಸಿದ್ದರು.

ಮದ್ರಾಸಿನಲ್ಲಿ ನಿರತರಾದ ಉತ್ತರ ಭಾರತೀಯರ ಕ್ರಾಂತಿಕಾರಿ ತಂಡದ ಸಂಪರ್ಕಕ್ಕೆ ಬಂದರು. ೧೯೩೩ರಲ್ಲಿ ಊಟಿಯಲ್ಲಿ ನಡೆಯಲಿದ್ದ ದಕ್ಷಿಣ ಭಾರತದ ನಾಲ್ವರು ಗವರ್ನರ್‌ಗಳ ಸಭೆಯಲ್ಲಿ ಅವರನ್ನು ಕೊಲ್ಲುವ ಯೋಜನೆಯನ್ನು ಮಾಡಿದ್ದರು. ಅದಕ್ಕೆ ಮುಂಚೆ ಸೀಮೆಎಣ್ಣೆ ಟ್ಯಾಂಕ್ ಒಂದನ್ನು ನಾಶಮಾಡಲೆಂದು ಹೋಗುವಾಗ ಒಬ್ಬರು ಎಡವಿ ಸ್ಫೋಟಗೊಂಡಿತು. ರೋಶನ್ ಲಾಲ್ ಎಂಬುವನು ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ. ಪೋಲಿಸರಿಗೆ ಸುಳಿವು ಸಿಕ್ಕಿ ಇವರ ಗುಪ್ತ ಕಛೇರಿಯ ಮೇಲೆ ದಾಳಿ ಮಾಡಿದರು. ಗೋವಿಂದರಾಂ ಎಂಬುವರು ಅಲ್ಲೇ ಸಾವನ್ನಪ್ಪಿದರು, ಉಳಿದೆಲ್ಲರಿಗೂ ಬಂಧನವಾಗಿ ೩೫ ವರ್ಷ ಶಿಕ್ಷೆಯಾಗಿ ಅವರನ್ನು ಅಂಡಮಾನ್ ಸೆಲ್ಯುಲಾರ್ ಜೈಲಿಗೆ ಸಾಗಿಸಿದರು.

ಅಂಡಮಾನ್ ಜೈಲು ನರಕವೆಂದು ಪ್ರಖ್ಯಾತವಾಗಿದ್ದು ಸಾವರ್ಕರ್, ಭಾಯಿ ಪರಮಾನಂದರಂಥ ದೇಶಭಕ್ತರು ಅಲ್ಲಿ ನರಕಯಾತನೆಗೆ ಒಳಗಾದದ್ದು ಪ್ರಸಿದ್ಧವಿದೆ. ಆದರೆ, ಸಚ್ಚಿದಾನಂದ ಶಿವಂ ಅವರು ಅಲ್ಲಿಗೆ ಹೋದ ಕಾಲಕ್ಕೆ ಪರಿಸ್ಥಿತಿ ತುಂಬಾ ಸುಧಾರಿಸಿತ್ತು. ಇವರು ಹೋಗುವ ಸ್ವಲ್ಪ ಮುಂಚೆ ಮಹಾವೀರ್ ಸಿಂಗ್ ಎಂಬ ಕೈದಿ ಉಪವಾಸ ಮಾಡಿ ಪ್ರಾಣಾರ್ಪಣೆ ಮಾಡಿದ್ದರಿಂದ ಅನೇಕ ಸುಧಾರಣೆಗಳಾಗಿದ್ದವು. ನಾರಿನಿಂದ ಹಗ್ಗ ಮಾಡುವುದನ್ನು ಬಿಟ್ಟು ಮತ್ಯಾವುದೇ ಶ್ರಮಗಳಿರಲಿಲ್ಲ. ಇವರು ೩ ವರ್ಷ ೯ ತಿಂಗಳು ಜೈಲುವಾಸ ಅನುಭವಿಸಿದರು, ೧೯೩೭ರಲ್ಲಿ ಬಿಡುಗಡೆಯಾದರು. ನಂತರ ಕಲ್ಕತಾಗೆ ಹೋಗಿ ಸುಭಾಷಚಂದ್ರ ಬೋಸರನ್ನು ಬೇಟಿಯಾಗಿ ಸಶಸ್ತ್ರ ಕ್ರಾಂತಿಯ ಬಗ್ಗೆ ಚರ್ಚಿಸಿ ಬಂದರು.

ನಂತರ ಸಚ್ಚಿದಾನಂದ ಶಿವಂ ಬೆಂಗಳೂರಿನಲ್ಲಿ ಕೆ.ಟಿ. ಭಾಷ್ಯಂ ಅವರೊಡನೆ ಸೇರಿ ಕಾಂಗ್ರೆಸ್‌ನಲ್ಲಿ ಸಕ್ರಿಯರಾದರು. ೧೯೪೦ರಲ್ಲಿ ಸೇನೆಯ

ಸಿಗ್ನಲ್ ಯುನಿಟ್ ನಲ್ಲಿ ನೌಕರಿಗೆ ಸೇರಿದರು. ಕ್ವಿಟ್ ಇಂಡಿಯಾ ಚಳುವಳಿಯ ಸಂಧರ್ಭದಲ್ಲಿ ಸಾಕಷ್ಟು ಅಶಾಂತಿ ಬೆಳೆದಿತ್ತು. ಸಚ್ಚಿದಾನಂದ ಶಿವಂ ಅವರು ಕಾಂಗ್ರಸ್ ಕಛೇರಿಯಿಂದ ತಂದ ಕರಪತ್ರಗಳನ್ನು ಹಂಚಿ, ಬ್ಯಾರಾಕ್ ಗಳಲ್ಲಿ ಗುಪ್ತ ಸಭೆ ನಡೆಸಿ ಜಾಗೃತಿಗೊಳಿಸುತ್ತಿದ್ದರು. ಮೇಲಿನ ಅಧಿಕಾರಿಗಳಿಗೆ ತಿಳಿದು ಇವರಿಗೆ 'ವಾರ್ನಿಂಗ್' ಕೂಡ ಬಂದಿತ್ತು. ಇವರ ಪ್ರೇರಣೆಯಿಂದ ಸೇನಾಸ್ಥಾವರಗಳಿಗೆ ಹಾನಿ, ವಾಹನಗಳಿಗೆ ತೊಂದರೆ ಮಾಡುವ ಬುಡಮೇಲು ಕೃತ್ಯ ಆರಂಭಿಸಿದ್ದರು. ಅಗರಂನಲ್ಲಿರುವ ಮದ್ದುಗುಂಡಿನ ಕೋಠಿಯನ್ನು ನಾಶಮಾಡುವ ಯೋಜನೆ ಹಾಕಿದ್ದರು. ಈ ಚಟುವಟಿಕೆ, ಯೋಜನೆಗಳು ಪತ್ತೆಯಾಗಿ ಸಚ್ಚಿದಾನಂದ ಶಿವಂ ಅವರನ್ನು ಬಂಧನ ಮಾಡಿದರು. ಕೋರ್ಟ್ ಮಾರ್ಷಲ್‌ಗೆ ಒಳಪಡಿಸಿ ೧ ವರ್ಷ ಶಿಕ್ಷೆ ವಿಧಿಸಿದರು. ವಾಸ್ತವದಲ್ಲಿ ಇವರು ಮಾಡಿದ ಅಪರಾಧಕ್ಕೆ ಗುಂಡಿಟ್ಟು ಕೊಲ್ಲುವ ಶಿಕ್ಷೆಯಿದ್ದರೂ ಸೇನೆಯಲ್ಲಿ ಅಶಾಂತಿ ಮೂಡಬಹುದೆಂಬ ಭಯದಿಂದ ಈ ಸೌಮ್ಯ ಶಿಕ್ಷೆ ನೀಡಿದರು. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇದ್ದಾಗಲೂ ಗಾಂಧಿಜಿ ೨೧ ದಿನ ಉಪವಾಸದ ಕಾರ್ಯಕ್ರಮ ತಿಳಿದು ಇವರೂ ೨೧ ದಿನ ಉಪವಾಸ ಮಾಡಿದರು. ಹೀಗೆ ಸಚ್ಚಿದಾನಂದ ಶಿವಂ ಅವರು ನಿರಂತರವಾಗಿ ವಿವಿಧ ಮಾರ್ಗಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ದಂಡು ಪ್ರದೇಶದ ಒಬ್ಬ ಮಹಾನ್ ಹೋರಾಟಗಾರರೆನ್ನಬಹುದು.

❑

## ೧೦. ಸಮಾಪನ

ಪ್ರಾರಂಭದಲ್ಲಿ ಕಂಟೋನ್ಮೆಂಟ್ ಬೆಳದಂತೆ ಅಲ್ಲಿನ ಸ್ಥಳಗಳಿಗೆ, ರಸ್ತೆಗಳಿಗೆ ಎಲ್ಲಾ ಸೈನ್ಯಕ್ಕೆ ಸಂಬಂಧಿಸಿದ ಹೆಸರುಗಳೇ ಇದ್ದವು. ಉದಾ:– ಇನ್ಫೆಂಟ್ರಿ ರೋಡ್, ಕ್ಯಾವಲ್ರಿ ರೋಡ್, ಆರ್ಟಲರಿ ರೋಡ್, ಗನ್ ಟ್ರೂಪ್ ರೋಡ್, ಇತ್ಯಾದಿ. ನಂತರ ಬ್ರಿಟಿಷ್ ಅಧಿಕಾರಿಗಳ ಹೆಸರನ್ನಿಡುವುದೂ ಸಾಮಾನ್ಯವಾಯಿತು. ೧೯೦೦ರಲ್ಲಿ ಲಾರ್ಡ್ ಕರ್ಜನ್ ಅವರ ಬೆಂಗಳೂರು ಭೇಟಿ ನೆನಪಿನಲ್ಲಿ ಕರ್ಜನ್ ಸ್ಟ್ರೀಟ್ ಇದೆ. ಸ್ಟುಆರ್ಟ್ ಫ್ರೇಸರ್ ಎಂಬ ರೆಸಿಡೆಂಟ್ ಹೆಸರಲ್ಲಿ ಫ್ರೇಸರ್ ಟೌನ್, ಅದರ ಮುಂಚಿನ ಹೆಸರು ಪಾಪರೆಡ್ಡಿ ಪಾಳ್ಯಂ, ಮುತ್ತು ಪರಪಣ್ಣ ಪಾಳ್ಯಂ ಆಗಿತ್ತು. ಕರ್ನಲ್ ಕ್ಲಾಕ್ಸ್ ಎಂಬ ರೆಸಿಡೆಂಟ್ ಹೆಸರಲ್ಲಿ ಕ್ಲಾಕ್ಸ್‌ಪೇಟೆ ಮುಂದೆ ಅದು ಮರ್ಫಿ ಟೌನ್ ಆಯಿತು. ಜೆ.ಮರ್ಫಿ ಎಂಬುವರು ಮುನಿಸಿಪಾಲ್ ಕಮೀಷನ್ನಿನ ಇಂಜಿನಿಯರ್ ಆಗಿದ್ದರು. ಡಾ॥ ಎಚ್. ಬೆನ್ಸನ್ ಅವರ ಹೆಸರಲ್ಲಿ ಬೆನ್ಸನ್ ಟೌನ್, ಕಲೆಕ್ಟರ್ ಆಗಿದ್ದ ಸರ್. ರಿಚರ್ಡ್ ಅವರಿಂದಾಗಿ ರಿಚರ್ಡ್ ಟೌನ್,. ಹೀಗೆ ಕಲೆಕ್ಟರ್‌ಗಳಾಗಿದ್ದ ಆಸ್ಟಿನ್, ಟಾಸ್ಕರ್, ಕುಕ್ಸ್, ವಿಲಿಯಮ್ಸ್ ಅವರ ಹೆಸರಲ್ಲೆಲ್ಲಾ ಟೌನ್‌ಗಳಿವೆ. ಅರ್ಥರ್ ಕೋಲ್ಸ್ ಹೆಸರಿನ ಕೋಲ್ಸ್ ಪಾರ್ಕ್ ಫ್ರೇಸರ್ ಟೌನ್‌ನಲ್ಲಿದೆ. ಸರ್ವೇಯರ್ ಗ್ರಾಂಟ್ ಹೆಸರಲ್ಲಿ ಗ್ರಾಂಟ್ ರೋಡ್ ಇದೆ. ಕ್ವೀನ್ಸ್ ರೋಡ್ ಇದೆ, ಎಡ್ವರ್ಡ್ ರೋಡಂತೂ ಇದ್ದೇ ಇದೆ. ಆಶ್ಚರ್ಯ ಎಂದರೆ ಸರ್ ಮಾರ್ಕ್ ಕಬ್ಬನ್ ಅವರ ಸೆಕ್ರೆಟ್ರಿಯಾಗಿದ್ದ ಕನ್ನಿಂಗ್ ಹ್ಯಾಮ್ ಅವರ ಹೆಸರಿನಲ್ಲೂ ರಸ್ತೆ ಉಳಿಸಿಕೊಂಡಿದ್ದೇವೆ. ಈ ಪ್ರದೇಶದಲ್ಲಿ ಓಡಾಡುತ್ತಿದ್ದರೆ ಮೇಲೆ ಉದಾಹರಿಸಿದ ಹೆಸರುಗಳು ನಮ್ಮನ್ನು ಇನ್ನೂ ಬ್ರಿಟಿಷರ ಕಾಲವಿದೆಯೋ ಎನಿಸುವಂತೆ ಮಾಡುತ್ತದೆ.

೧೯೪೭ರಲ್ಲಿ ನಮ್ಮ ದೇಶ ಸ್ವತಂತ್ರವಾಯಿತು, ಎಲ್ಲೆಡೆ ಸ್ವಾಭಿಮಾನ ಚಿಮ್ಮಿ ನಮ್ಮತನವನ್ನು ಪ್ರಕಟಿಸುವ ಪ್ರಯತ್ನ ಸಾಗಿತು. ಆ ಸಂಧರ್ಭದಲ್ಲಿ ಬ್ರಿಟಿಷರು ತಮ್ಮ ಅನುಕೂಲಕ್ಕಾಗಿ ಇಟ್ಟ ಹೆಸರುಗಳನ್ನು ಬದಲಿಸಬೇಕಿತ್ತು. ಪ್ರಾಯಶ: ಯಾವುದೇ ದೇಶ ಸ್ವತಂತ್ರವಾದ ಮೇಲೆ ತಮ್ಮ ದೇಶದ ಮೇಲೆ ದಬ್ಬಾಳಿಕೆ–ದುರಾಡಳಿತ ನಡೆಸಿದ ಪರಕೀಯರ ಹೆಸರು–ನೆನೆಪುಗಳನ್ನು ಇಡಲು ಬಯಸುವುದಿಲ್ಲ. ಸ್ವಾತಂತ್ರ್ಯದ ಅಮೃತೋತ್ಸವದ ಈ ಶುಭ ಸಂದರ್ಭದಲ್ಲಾದರೂ ಕಂಟೋನ್ಮೆಂಟ್ ಪ್ರದೇಶವನ್ನು ಈ ಹೋರಾಟದಲ್ಲಿ ಭಾಗವಹಿಸಿದ ಮಹನೀಯರ ಹೆಸರುಗಳನ್ನು ಇಡುವ ಮೂಲಕ ಗೌರವ ಸೂಚಿಸಬಹುದು ಹಾಗೂ ಪಾರತಂತ್ರ್ಯದ ಕಹಿ ನೆನಪನ್ನು ನೀಡುವ ಬ್ರಿಟಿಷ್ ಹೆಸರುಗಳನ್ನು ಬದಲಿಸಬೇಕಾಗಿದೆ.

ಸ್ವಾತಂತ್ರ್ಯ ಎಂಬುದು ಸುಲಭವಾಗಿ ಸಿಕ್ಕ ಸರಕಲ್ಲ. ಇದನ್ನು ಪಡೆಯಲು ಹಲವಾರು ಜನ ತಮ್ಮ ಯೌವನವನ್ನು, ವೃತ್ತಿಯನ್ನು, ಸಂಸಾರವನ್ನು ಕಳೆದುಕೊಳ್ಳಬೇಕಾಯಿತು. ಇನ್ನು ಕೆಲವರು ತಮ್ಮ ಪ್ರಾಣಾರ್ಪಣೆಯನ್ನು ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟದ ಯಾವುದೋ ಕೆಲವು ಪ್ರಮುಖ ನಾಯಕರು, ಸಂಸ್ಥೆಗಳ ಹೆಸರುಗಳು ಗೊತ್ತಿರುತ್ತವೆ ಕೆಲವು ಪ್ರಮುಖ ಊರಿನ ಹೋರಾಟಗಳು ಪ್ರಸಿದ್ಧವಾಗಿರುತ್ತದೆ. ಆದರೆ ಅಸಂಖ್ಯ ಊರುಗಳಲ್ಲಿ ನಡೆದಿರುವ ಅಜ್ಞಾತ ಹೋರಾಟಗಾರರ ಪರಿಚಯ ಈ ರೀತಿ ಪುಸ್ತಕಗಳಿಂದ ಮಾತ್ರ ಸಮಾಜಕ್ಕೆ ಸಿಗಲು ಸಾಧ್ಯ.

'ಸದಾ ಜಾಗುರೂಕತೆಯೇ ಸ್ವಾತಂತ್ರ್ಯಕ್ಕೆ ತೆರಬೇಕಾದ ಬೆಲೆ' ಎಂಬ ಮಾತಿನಂತೆ ಇಂದಿನ ಪೀಳಿಗೆ ಸ್ವಾತಂತ್ರ್ಯದ ಮಹತ್ತ್ವವನ್ನು ಅರಿಯುವಂತಾಗಲಿ. 'ಪರತಂತ್ರವಿದ್ದಾಗ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಮೆ, ಸ್ವತಂತ್ರವಿದ್ದಾಗ ದೇಶದ ವಿಕಾಸಕ್ಕಾಗಿ ದುಡಿಮೆ' ಇದು ದೇಶಭಕ್ತರ ಮೂಲಮಂತ್ರ. ಸದಾ ಜಗೃತರಾಗಿದ್ದು ದೇಶದ ಒಳಿತಿಗಾಗಿ ನಮ್ಮ ನಡೆ ಸಾಗಲಿ. ರಾಷ್ಟ್ರಕವಿ ಕುವೆಂಪು ಅವರ ಈ ಮಾತುಗಳು ನಮಗೆ ಸದಾ ದಾರಿ ದೀಪ:



**ಭರತಖಂಡದ ಹಿತವೆ ಎನ್ನ ಹಿತವೆಂದು**
**ಭರತಖಂಡದ ಮತವೆ ಎನ್ನ ಮತವೆಂದು**
**ಭಾರತಾಂಬೆಯ ಮುಕ್ತಿ ಮುಕ್ತಿ ಎನಗೆಂದು**
**ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ**
**ಜಗ್ಗದಯೇ ಕುಗ್ಗದಯೇ ಹಿಗ್ಗಿ ನಡೆ ಮುಂದೆ.**

❑

## ೧೧. ಗ್ರಂಥ ಋಣ

- ಬೆಂಗಳೂರು ಕೆಂಪೇಗೌಡ – ಪ್ರೊ. ಎಂ.ವಿ. ಕೃಷ್ಣರಾವ್ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)
- ಬೆಂಗಳೂರಿನ ನೋಟಗಳು – ಕೆ. ಚಂದ್ರಮೌಳಿ (ಪ್ರಿಸಂ)
- ಬೆಂಗಳೂರಿನ ಇತಿಹಾಸ – ಬ.ನ. ಸುಂದರರಾವ್ (ಅಂಕಿತಾ ಪುಸ್ತಕ)
- ಬೆಂಗಳೂರು ಪರಂಪರೆ (ಇತಿಹಾಸ ಸಂಶೋಧನೆಯ ಹೊಸ ನೋಟಗಳು)– ಎಸ್.ಕೆ.ಅರುಣಿ (ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು)
- ಬೆಂಗಳೂರು ದರ್ಶನ – (ಉದಯಭಾನು ಕಲಾಸಂಘ, ಬೆಂಗಳೂರು)
- ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ – ಕೆ.ವೀರಪ್ಪ
- ಸ್ವಾತಂತ್ರ್ಯ ಸೂರ್ಯೋದಯ – ಡಾ. ಸೂರ್ಯನಾಥ ಕಾಮತ್ ( ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು)
- ಯುಗಾವತಾರ – ಹೊ.ವೆ. ಶೇಷಾದ್ರಿ ( ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು)
- Bengaluru to Bangalore (Urban history of Bangalore from the pre-historic period to the end of 18th century ) - T.V. Annaswamy (Vengadam Publications, Bangalore)

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮು ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |